ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

# ಕಲಾ ವಾರ್ತೆ

ಜುಲೈ – ಸೆಪ್ಟೆಂಬರ್ 2015, ಸಂಚಿಕೆ: 97

ಪ್ರಧಾನ ಸಂಪಾದಕರು
**ಡಾ. ಎಂ.ಎಸ್.ಮೂರ್ತಿ**

ಸಂಪಾದಕರು
**ರಾಜು ಮಳವಳ್ಳಿ**

ಪ್ರಕಟಣಾ ಸಮಿತಿ
**ಎಸ್.ಜಿ. ವಾಸುದೇವ್**
**ಕೆ.ವಿ. ಸುಬ್ರಹ್ಮಣ್ಯಂ**
**ಡಾ. ಪ್ರಮೀಳಾ ಲೋಚನ**
**ಸಿ. ಚಿಕ್ಕಣ್ಣ**

ಕನ್ನಡ ಭವನ, ಎರಡನೇ ಮಹಡಿ,
ಜೆ.ಸಿ. ರಸ್ತೆ, ಬೆಂಗಳೂರು–560002
ದೂರವಾಣಿ: 080–2248 0297
ಈ–ಮೇಲ್: kla.karnataka@gmail.com
www. lalitkalakarnataka.org
karnataka lalitha kala academy

**KALA VARTHE** - Quarterly News portal
Published by
Registrar
Karnataka Lalitha Kala Academy
Kannada Bhavan, J.C. Road
Bangalore - 560 002
Ph : 080 - 2248 0297
E-mail : kla.karnataka@gmail.com
www.lalitkalakarnataka.org

Editor :
Raju Malavalli
M: 9739977450

Page : 44 +4
Copies : 2000

Printed at
**Regal Print Service**
Bangalore
M: 9964351655

## ಪರಿವಿಡಿ


- ಅಧ್ಯಕ್ಷರ ಮಾತು ... 3
- ಸಂಪಾದಕರ ನುಡಿ ... 4
- ಹೊಸ ಹೆಜ್ಜೆ ... 7
- ನೋಟ–ಒಳನೋಟ ...9,28
- ಪ್ರಶಸ್ತಿ ಸಂಭ್ರಮ ... 14
- ಕಲಾಪರಿಚಾರಿಕೆ ... 16
- ಅಕಾಡೆಮಿಯ ಮಾಧ್ಯಮ ಚಿತ್ರಗಳು ... 26
- ಸುವರ್ಣ ಕಲಾವಿದರು ... 30
- ಅಕಾಡೆಮಿಯ ಪುಸ್ತಕ ಭಂಡಾರ ... 36
- ವೆಂಕಟಪ್ಪ ಪ್ರಶಸ್ತಿ ಪುರಸ್ಕೃತರು ... 40



# ವಿಶ್ವಾಸದ ನಡೆ

ಎರಡನೇ 'ಕಲಾವಾರ್ತೆ' ನಿಮ್ಮ ಕೈಯಲ್ಲಿದೆ. ಜೊತೆಗೇ ಕಲಾ ಸಾಹಿತ್ಯ, ಕಲೆಯ ಚಿಂತನೆಗೆ, ಚರ್ಚೆಗೆ ವೇದಿಕೆಯಾಗಬೇಕೆಂಬ ಆಶಯದ 'ಕಲಾ' ಪತ್ರಿಕೆಯೂ ಸಿದ್ಧವಾಗುತ್ತಿದೆ. 2016ರಲ್ಲಿ 'ಕಲಾಸಂಕ್ರಾಂತಿ' ವಿಶೇಷ ಕಲಾಸಮ್ಮಿಲನ ಬೆಂಗಳೂರಿನಲ್ಲಿ ನಡೆಸುವ ನಿರ್ಧಾರವಾಗಿದೆ. ರಾಜ್ಯದ ಅನೇಕ ಗ್ರಾಮೀಣ ಭಾಗಗಳಲ್ಲಿ ಕಲಾಶಿಬಿರಗಳು ಯಶಸ್ವಿಯಾಗಿ ನಡೆಯುತ್ತಿವೆ. ದೂರದ ಹಳ್ಳಿಯಲ್ಲಿ ಕಲಾಭ್ಯಾಸ ಮಾಡುತ್ತಿರುವ ಕಲಾವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಬೆಂಗಳೂರಿನಲ್ಲಿ ಎಂದಿನಂತೆ ಪ್ರತಿ ತಿಂಗಳು 'ತಿಂಗಳ ಚಿತ್ರ' ಪ್ರದರ್ಶನಕ್ಕೆ ಯುವಕಲಾವಿದರಿಗೆ ಅವಕಾಶ ನೀಡಲಾಗುತ್ತಿದೆ.

ಕಲಾಸಾಹಿತ್ಯದ ಕೃಷಿ, ಚಿಂತನೆಯುನ್ನು ಗಮನದಲ್ಲಿರಿಸಿಕೊಂಡು ಮಡಿಕೇರಿಯಲ್ಲಿ 'ದೃಶ್ಯಕಲೆಯಲ್ಲಿ ರೇಖೆಗಳ ಪ್ರಾಧ್ಯಾನ್ಯತೆ' ಕುರಿತ ವಿಚಾರಸಂಕಿರಣ ನಡೆಯಲಿದೆ. ಆ ವಿಚಾರ ಸಂಕಿರಣದ ಎಲ್ಲಾ ಪ್ರಬಂಧಗಳ ಸಂಗ್ರಹ 'ಕಲಾ' ಪತ್ರಿಕೆಯ ಮೂಲಕ ನಿಮಗೆ ತಲುಪಲಿದೆ.

ಧರ್ಮ, ಜಾತಿ, ಪ್ರದೇಶಗಳನ್ನು ಮೀರಿ ನಮ್ಮ 'ದೃಶ್ಯಕಲೆ'ಯು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿರುವ ಚರಿತ್ರೆ ನಮ್ಮೊಂದಿಗಿದೆ. ಅಂಥಹಾ ಕಲಾ ಪರಂಪರೆಯನ್ನು ಮುಂದುವರಿಸುವ ಮತ್ತು ದೃಶ್ಯಕಲೆಯ ಘನತೆಯನ್ನು ಹೆಚ್ಚಿಸುವಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಶ್ರಮಿಸುತ್ತಿದೆ. ಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಯೋಜನೆಯಡಿ ನೀಡಲಾಗುವ ವಿಶೇಷ ಅನುದಾನವನ್ನು ಆಯಾ ವರ್ಗದ ಅರ್ಹ ಕಲಾವಿದರ ಕಾರ್ಯಕ್ರಮಗಳಿಗೇ ಬಳಸುತ್ತಾ, ವಿಶೇಷ ಕಲಾಶಿಬಿರಗಳನ್ನು ಆಯೋಜಿಸುವಲ್ಲಿ ಅಕಾಡೆಮಿ ತನ್ನ ಪ್ರಗತಿಪರ ನಿಲುವನ್ನು ಸ್ಪಷ್ಟಪಡಿಸಿದೆ. ಇಂತಹಾ ವಿಶೇಷ ಯೋಜನೆಗಳ ಕಲಾಶಿಬಿರಗಳಿಗೆ ವಿಶಿಷ್ಟವಾದ ಶೀರ್ಷಿಕೆಯಾಗಿ ಆಯಾ ಋತುಗಳ ಹೆಸರನ್ನು ಆಯಾ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ. ವಸಂತ, ವೈಶಾಖ, ಯುಗಾದಿ, ಗ್ರೀಷ್ಮ, ಮುಂಗಾರು, ಹಿಂಗಾರುಗಳೊಂದಿಗೆ ಸಹಯೋಗದ ಕಲಾಶಿಬಿರಗಳಾದ 'ಸ್ಪರ್ಶ' ಮೈಸೂರು ವಿಶ್ವವಿದ್ಯಾಲಯದ ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ಪರಿಶಿಷ್ಟ ಜಾತಿ/ವರ್ಗದ ಕಲಾಶಿಬಿರದೊಂದಿಗೆ ಇತರರೂ ಬೆರೆತು ಪರಸ್ಪರ ಕಲಾವಿದರಾಗಿ ಬೆಳೆಯುವ ವಿಭಿನ್ನ ಪ್ರಯತ್ನ, ಪ್ರಯೋಗ ನಡೆದಿದೆ. ಇದು ನಮ್ಮ ಈ ಅವಧಿಯ, ಈ ಸಂದರ್ಭದ ಹೆಮ್ಮೆಯ ಅರ್ಥಪೂರ್ಣ ಕೆಲಸಗಳು.

ಕರ್ನಾಟಕದ ಎಲ್ಲಾ ಕಲಾವಿದರಿಗೆ, ಕಲಾಸಕ್ತರಿಗೆ ಶುಭಕೋರುತ್ತಾ ಸುವರ್ಣ ಸಂಭ್ರಮದ ಸಂತೋಷದಲ್ಲಿ ಎಲ್ಲರೂ ಭಾಗಿಯಾಗೋಣ.

**ಡಾ. ಎಂ.ಎಸ್.ಮೂರ್ತಿ**
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ

## ದಾಖಲೀಕರಣದ ಹಾದಿಯೆಡೆಗೆ...

**ಕ**ಲೆ ಎಂದಿಗೂ ನಿಂತ ನೀರಲ್ಲ. ಸದಾ ಹರಿಯುವ ಜುಳು ಜುಳು ಧಾರೆ, ಪಾವನಗಂಗೆ. ಚಲನಶೀಲತೆಯೇ ಜೀವಂತಿಕೆಯ ಕುರುಹು. ಬದಲಾವಣೆ ಜಗದ ನಿಯಮ. ಪ್ರಕೃತಿಯ ಧರ್ಮವೂ ಕೂಡ. ಕಲೆ ಸಹ ಆ ಧರ್ಮಕ್ಕೆ ಹೊರತಲ್ಲ. ಹೊಸತಿನ ಹುಡುಕಾಟ, ಮಿಡುಕಾಟಗಳು ಕಲೆಯ ಔನತ್ಯಕ್ಕೆ ಇರುವ ರಾಜಮಾರ್ಗ. ಪ್ರಯೋಗಶೀಲತೆ ಸೃಜನಶೀಲತೆಯ ಕನ್ನಡಿ. ಹೊಸ ಹೊಸ ಪ್ರಯೋಗಗಳು ಕಲೆಯ ಪ್ರಕಾಶಮಾನಕ್ಕೆ ರಹದಾರಿ.

ಅಂತಹ ಪ್ರಯೋಗಗಳ ಬೆನ್ನತ್ತುವಿಕೆಯೇ ಕನಸುಗಳನ್ನು ಸಾಕಾರಗೊಳಿಸುವುದೆಂಬುದು ಲೋಕವೇ ಅರಿತಿರುವ ನಿತ್ಯ ಸತ್ಯ. ಐವತ್ತು ಸಾರ್ಥಕ ವಸಂತಗಳನ್ನು ಕಂಡು ಮುನ್ನುಗ್ಗುತ್ತಿರುವ ಕರ್ನಾಟಕ ಲಲಿತಕಲಾ ಅಕಾಡೆಮಿ ಕಾಲಾನುಕಾಲಕ್ಕೆ ಹೊಸತನಕ್ಕೆ ತೆರೆದುಕೊಳ್ಳುತ್ತಾ ಬಂದಿದೆ. ಕಲಾವಲಯದ ನಿರೀಕ್ಷೆಗಳಿಗೆ ಸ್ಪಂದಿಸುತ್ತಾ ಹೊಸ ಸಾಕ್ಷಾತ್ಕಾರದೆಡೆಗೆ ಸಾಗುತ್ತಲಿದೆ. ಸುವರ್ಣ ಸಂಭ್ರಮದ ಈ ಕ್ಷಣದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಅನೇಕ ಹೊಸ ಚಿಂತನೆ–ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಹಮ್ಮಿಕೊಂಡು ಅವುಗಳ ಸಾಕಾರಕ್ಕಾಗಿ ನಿತ್ಯ ಶ್ರಮಿಸುತ್ತಲಿದೆ.

ಕಲೆ ಮತ್ತು ಕಲಾಸಮುದಾಯದ ಉನ್ನತಿಗಾಗಿ ನಡೆಯುವ ಪ್ರತಿ ಪ್ರಯತ್ನ–ಪ್ರಯೋಗಗಳೆಲ್ಲವೂ ಉತ್ತಮ ಹೆಜ್ಜೆಯೇ. ಆ ಹೆಜ್ಜೆಗಳ ಗುರುತನ್ನು

ದಾಖಲಿಸುವುದು, ಇತಿಹಾಸದ ಪುಟಗಳಲ್ಲಿ ಸವಿ ನೆನಪಿನ ಸ್ಥಾಯೀಭಾವವಾಗಿಸುವುದು ಬಹು ಮುಖ್ಯ ಕೆಲಸ. ಈ ಕೈಂಕರ್ಯದ ಪ್ರತಿರೂಪವೇ 'ಕಲಾ ವಾರ್ತೆ'. ಅಕಾಡೆಮಿಯ ಆಲೋಚನೆ, ಪರಿಕಲ್ಪನೆ ಮತ್ತು ಯೋಜನೆಗಳನ್ನು ಕಲಾಸಕ್ತರು ಹಾಗೂ ಕಲಾಸಮುದಾಯಕ್ಕೆ ಮುಟ್ಟಿಸುವ 'ಸಂವಹನ ವಾಹಕ'ವೇ ಈ ತ್ರೈಮಾಸಿಕ ವಾರ್ತಾ ಪತ್ರ.

ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಮೇದು–ಉತ್ಸಾಹ ಹೆಚ್ಚಿಸಿದೆ. ಇದೀಗ ನಿಮ್ಮ ಕೈ ಸೇರುತ್ತಿರುವ ನವೀಕೃತ 'ಕಲಾ ವಾರ್ತೆ'ಯ ಎರಡನೇ ಸಂಚಿಕೆ ಹೊರಬರಲು ಕೊಂಚ ಹೆಚ್ಚಿನ ಕಾಲಾವಕಾಶ ತೆಗೆದುಕೊಂಡಿರುವುದೇನೋ ನಿಜ. ಅದಕ್ಕೆ ಹತ್ತಾರು ಕಾರಣಗಳುಂಟು. ಅವೆಲ್ಲವನ್ನೂ ಒತ್ತಿಗಿಟ್ಟು ಎರಡನೇ ಸಂಚಿಕೆಯ ಮೇಲೆ ಕಣ್ಣಾಡಿಸಿದರೆ ಓದುಗ ವಲಯಕ್ಕೆ ಮತ್ತಷ್ಟು ಹೊಸತಿನ ದರ್ಶನವಾಗುವುದು ಖಚಿತ.

ಅಕಾಡೆಮಿಯ ಹೊಸ ಹೆಜ್ಜೆ, ಕಲಾಪರಿಚಾರಿಕೆ ಮತ್ತಿತರ ವಿವರಗಳ ಜೊತೆಗೆ ಕಲಾಸಾಹಿತ್ಯವೂ ಬೆರೆತಿರುವುದು ಈ ಸಂಚಿಕೆಯ ವಿಶೇಷ.

ಕಲಾವಲಯದ ಒಳಹೊರಗು, ಹೊಳಹು ಮತ್ತು ಕಲಾವಿದನ ಕಲೆಯ ಆಂತರಿಕ ಸೌಂದರ್ಯವನ್ನು ಬಹಳ ಸರಳವಾಗಿ ತೆರದಿಡುವ ಎರಡು ಲೇಖನಗಳು ಈ ಸಂಚಿಕೆಯಲ್ಲಿದ್ದು ಕಲಾಸಾಹಿತ್ಯ ಪ್ರೇಮಿಗಳಿಗೆ ಭಿನ್ನ ಸರಕನ್ನು ಒದಗಿಸಿದೆ. ಕಲಾಸಾಹಿತ್ಯದ ಓದುಗ ವಲಯವನ್ನು ಸಂಪ್ರೀತಗೊಳಿಸಲಿರುವುದು ಖಂಡಿತ.

ಇದರೊಟ್ಟಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಕಳೆದ ಐವತ್ತು ವರ್ಷಗಳಲ್ಲಿ ನಡೆದುಬಂದ ದಾರಿಯನ್ನು ತೋರ್ಗಾಣಿಸಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಅಕಾಡೆಮಿ ಈವರೆಗೆ ಪ್ರಕಟಿಸಿರುವ ಪುಸ್ತಕಗಳ ಭಂಡಾರದಲ್ಲಿರುವ ಕೃತಿಗಳ ಪರಿಚಯವನ್ನು ಮಾಡಿಕೊಡುವುದರ ಜೊತೆಗೆ ಯಾವ ಪುಸ್ತಕಗಳಿಗೆ ಎಷ್ಟೆಷ್ಟು ದರ? ಎಷ್ಟೆಷ್ಟು ರಿಯಾಯಿತಿ? ಮುಂತಾದ

ಮಾಹಿತಿಯನ್ನು ವಿವರವಾಗಿ ನೀಡಲಾಗಿದೆ. ಅಂತೆಯೇ 1994ರಿಂದ ಈವರೆಗೆ 'ಚಿತ್ರಶಿಲ್ಪಿ ವೆಂಕಟಪ್ಪ ಪ್ರಶಸ್ತಿ' ಪುರಸ್ಕೃತರ ಪಟ್ಟಿ (ಸಚಿತ್ರ ಸಮೇತ), ಅಕಾಡೆಮಿಯು ಅಸ್ತಿತ್ವಕ್ಕೆ ಬಂದಾಗಿನಿಂದ ಈವರೆಗೆ ಗೌರವ ಪ್ರಶಸ್ತಿಗೆ ಭಾಜನರಾದ 'ಸುವರ್ಣ ಕಲಾವಿದರ' ಪಟ್ಟಿಯನ್ನು ಆಯಾ ವರ್ಷಗಳ ಕ್ರಮಾನುಕರಣಿಕೆ ಯಲ್ಲಿ ನಮೂದಿಸಲಾಗಿದ್ದು ಕಲಾಸಕ್ತರು ಸಂಗ್ರಹಿಸಿಟ್ಟು ಕೊಳ್ಳುವಂತೆ ರೂಪಿಸಲಾಗಿದೆ.

ಮುಂಬರುವ ದಿನಗಳಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಕಲಾಸಂಕ್ರಾಂತಿಯ ಅರ್ಜಿ ನಮೂನೆ, ಮಾನ್ಯತೆ ಪಡೆದ ಕಲಾವಿದರಿಗೆ ಅಕಾಡೆಮಿ ವತಿಯಿಂದ ನೀಡಲಾಗುತ್ತಿರುವ ಗುರುತಿನ ಚೀಟಿಗೆ ಅರ್ಜಿ ನಮೂನೆಯನ್ನು ಈ ಸಂಚಿಕೆಯಲ್ಲಿ ಮುದ್ರಿಸಲಾಗಿದ್ದು ಆಸಕ್ತರ ಅರ್ಜಿ ಸಲ್ಲಿಸುವಿಕೆಗೆ ಮಾದರಿಯನ್ನು ಒದಗಿಸಲಾಗಿದೆ. ಒಟ್ಟಾರೆ 'ಕಲಾ ವಾರ್ತೆ'ಯ ಪ್ರತಿ ಸಂಚಿಕೆಯೂ ಅರ್ಥಪೂರ್ಣವೂ, ಮಾಹಿತಿ ಪೂರ್ಣವೂ ಆಗಿರಬೇಕೆಂಬ ಮೂಲ ಧ್ಯೇಯೋದ್ದೇಶ ವನ್ನು ಮತ್ತಷ್ಟು ಬಲಪಡಿಸುವ ಪ್ರಯತ್ನವನ್ನು ಮಾಡಲಾಗಿದ್ದು ಕಲಾಪ್ರೇಮಿಗಳು ಮತ್ತು ಕಲಾ ಸಮುದಾಯದ ಪ್ರತಿಕ್ರಿಯೆ, ಸಲಹೆ, ಮಾರ್ಗದರ್ಶನ ವನ್ನು ನಾನಿಲ್ಲಿ ಎದಿರುನೋಡುತ್ತಿದ್ದೇನೆ. ಸರ್ವರಿಗೂ ಶುಭವಾಗಲಿ.

**ಕಲೆ ಉಳಿಯಲಿ, ಕಲೆ ಬೆಳಗಲಿ**

**ರಾಜು ಮಳವಳ್ಳಿ**
ಸಂಪಾದಕರು

# ತಿಂಗಳ ಕಲಾವಿದರು

**ಸು**ವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ಕರ್ನಾಟಕ ಲಲಿತಕಲಾ ಅಕಾಡೆಮಿ ದೃಶ್ಯಕಲೆಯ ಹೊಸ ಹೊಸ ಸಾಧ್ಯತೆಗಳ ಮೇಲೆ ಬೆಳಕು ಚೆಲ್ಲಲು ಹತ್ತು ಹಲವು ಹೊಸ ಕಾರ್ಯಕ್ರಮ–ಯೋಜನೆಗಳನ್ನು ಹಮ್ಮಿಕೊಂಡು ಸಾಕಾರಗೊಳಿಸುತ್ತಲಿದೆ.

ಅಕಾಡೆಮಿಯ ಪ್ರತಿ ಹೊಸ ಹೆಜ್ಜೆಯೂ ಕಲಾವಲಯದ ದೃಷ್ಟಿಯಿಂದ ಬಹುಮುಖ್ಯವಾಗಿದ್ದು ಅಂತಹುದೇ ಮತ್ತೊಂದು ಹೆಜ್ಜೆ **'ತಿಂಗಳ ಕಲಾವಿದರು'** ಕಾರ್ಯಕ್ರಮ.

ಪ್ರತಿ ತಿಂಗಳು ನಾಡಿನ ಹೆಸರಾಂತ, ಸಾಧನೆಯ ಕೃಷಿ ಮಾಡಿದ ಓರ್ವ ಕಲಾವಿದರನ್ನು ಅಕಾಡೆಮಿಯ ಅಂಗಳಕ್ಕೆ ಕರೆಯಿಸಿ ಅವರ ಅನುಭವ, ಜೀವನಗಾಥೆ, ಸಾಧನೆಯ ವಿವಿಧ ಮಜಲುಗಳನ್ನು ಅವರಿಂದಲೇ ಕಲಾವಲಯದ ಮುಂದೆ ತೆರೆದಿಡಲು ಅವಕಾಶ ಕಲ್ಪಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶ. ಇದರೊಟ್ಟಿಗೆ ಕಲಾವಲಯದ ಸ್ಥಿತ್ಯಂತರ, ಹೊಸ ಹೊಳಹುಗಳು, ಸಮಸ್ಯೆ–ಸವಾಲುಗಳ ಕುರಿತು ಚರ್ಚೆ ನಡೆಸುವುದು ಈ ವಿನೂತನ ಕಾರ್ಯಕ್ರಮದ ಮತ್ತೊಂದು ಮುಖ. ಕಾರ್ಯಕ್ರಮದಲ್ಲಿ ಓರ್ವ ಕಲಾವಿದರು ಆಹ್ವಾನಿತ ತಿಂಗಳ ಕಲಾವಿದರೊಬ್ಬರೊಂದಿಗೆ ಸಂವಾದ ನಡೆಸುವ ಮೂಲಕ ಅವರೊಳಗಿನ ವಿಚಾರಧಾರೆ ಹೊರಹೊಮ್ಮಲು ನೆರವಾಗುತ್ತಾರೆ.




**'ತಿಂಗಳ ಕಲಾವಿದರು' ಕಾರ್ಯಕ್ರಮದಲ್ಲಿ ಶ್ರೀ ಯು. ಭಾಸ್ಕರರಾವ್**

ಈ ಪರಿಕಲ್ಪನೆಯ ಮೊದಲ ಕಾರ್ಯಕ್ರಮ ಸೆಪ್ಟೆಂಬರ್ 11ರಂದು ಕನ್ನಡ ಭವನದ 'ವರ್ಣ ಗ್ಯಾಲರಿ'ಯಲ್ಲಿ ನಡೆಯಿತು. ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಪುರಸ್ಕೃತ ಕಲಾವಿದ ಶ್ರೀ ಯು. ಭಾಸ್ಕರರಾವ್ ಅವರು 'ತಿಂಗಳ ಕಲಾವಿದ'ರಾಗಿ ಆಗಮಿಸಿದ್ದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಚಿ. ಸು. ಕೃಷ್ಣಸೆಟ್ಟಿ ಅವರು ಸಂವಾದ ನಡೆಸಿಕೊಟ್ಟರು.

ಮುಕ್ತ ಸಂವಾದದಲ್ಲಿ ತಮ್ಮ ವಿಚಾರಲಹರಿಯನ್ನು ಹರಿಬಿಟ್ಟ ಭಾಸ್ಕರ್ ರಾವ್ ಅವರು, 'ವಿಮರ್ಶೆ ಮಾತ್ರದಿಂದಲೇ ಚಿತ್ರ, ಶಿಲ್ಪಕಲೆಯನ್ನು ಮತ್ತೊಬ್ಬರಿಗೆ ಅರ್ಥಮಾಡಿಸಲು ಸಾಧ್ಯವಿಲ್ಲ. ಹಾಗಾಗಿ ಕಲಾಕೃತಿಯ ತೀರ್ಪನ್ನು ನೋಡುಗರಿಗೆ ಬಿಡುವುದು ಉತ್ತಮ' ಎಂದು ಅಭಿಪ್ರಾಯಪಟ್ಟರು.

'ಚಿತ್ರಕಲೆ ಸ್ವತಂತ್ರ ಕಲೆ. ಇಲ್ಲಿ ಕಲಾವಿದನ ಬೆಂಬಲಕ್ಕೆ ಯಾರೂ ಬರುವುದಿಲ್ಲ. ಆದ್ದರಿಂದ ಸಾಹಿತ್ಯಕ್ಕೆ ವ್ಯಾಕರಣ ಎಷ್ಟು ಮುಖ್ಯವೋ ಚಿತ್ರಕಲೆಗೆ ಮೂಲ ಶಿಕ್ಷಣ ಅಷ್ಟೇ ಮುಖ್ಯ' ಎಂದು ಭಾಸ್ಕರ್‌ರಾವ್ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಎಂ.ಎಸ್.ಮೂರ್ತಿ ಅವರು ಮಾತನಾಡಿ, 'ನಮ್ಮಲ್ಲಿ ಕಲಾಚಿಂತನೆಗೆ ಅಗತ್ಯವಾದ ಗಮನಕೊಟ್ಟಿಲ್ಲವೆಂಬ ಆರೋಪವಿತ್ತು. ಆ ದೆಸೆಯಲ್ಲಿ ಹಿರಿಯ ಕಲಾವಿದರು ತಮ್ಮ ತಾತ್ವಿಕ ಚಿಂತನೆ, ವೈಯಕ್ತಿಕ ಆಲೋಚನೆ, ಹಲವು ದಶಕಗಳಿಂದ ಸಾಧಿಸಿದ ಒಳನೋಟವನ್ನು ಯುವ ಕಲಾವಿದರೊಂದಿಗೆ ಹಂಚಿಕೊಂಡು ಚರ್ಚೆ ನಡೆಸಲೆಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ' ಎಂದರು. ಅಕಾಡೆಮಿಯ ರಿಜಿಸ್ಟ್ರಾರ್ ಸುಧೀಂದ್ರ, ಹಿರಿಯ-ಸಮಕಾಲೀನ ಕಲಾವಿದರ ದಂಡು ಕಾರ್ಯಕ್ರಮಕ್ಕೆ ಸಾಕ್ಷಿಯಾಯಿತು. ಈ ಸಂದರ್ಭದಲ್ಲಿ ಅಕಾಡೆಮಿ ಹೊರತರುವ ತ್ರೈಮಾಸಿಕ ವಾರ್ತಾ ಪತ್ರ **'ಕಲಾ ವಾರ್ತೆ'**ಯ ಹೊಸ ಸಂಚಿಕೆಯನ್ನು ಭಾಸ್ಕರ್‌ರಾವ್ ಅವರು ಲೋಕಾರ್ಪಣೆ ಮಾಡಿದರು.

■



**'ತಿಂಗಳ ಕಲಾವಿದರು' ಕಾರ್ಯಕ್ರಮಕ್ಕೆ ಸಾಕ್ಷಿಯಾದ ಕಲಾ ಸಮೂಹ**

# ಸಂಭ್ರಮಿಸುವ ಮನಸ್ಸು ಮತ್ತು ಮಾಡುವಿಕೆಯ ಮಾಟದ ಆಟ

● *ಕೆ.ವಿ. ಸುಬ್ರಮಣ್ಯಂ*

**ದೃ**ಶ್ಯಕಲೆಯಲ್ಲಿ ರೇಖೆ, ರೂಪ, ಬಣ್ಣಗಳ ಆಟ ಮತ್ತು ಮಾಟಗಳಿಗೆ ಇರುವ ಪರಂಪರೆಯನ್ನು ಮುಂದುವರೆಸಿಕೊಂಡು ನಮ್ಮ ಕಾಲಕ್ಕೂ ತಲುಪಿಸುವಲ್ಲಿ ಹಲವು ಹಿರಿಯ ಕಲಾವಿದರು ಪಾಲ್ಗೊಂಡಿದ್ದಾರೆ. ಅವರಲ್ಲಿ ಸ್ವಾಮಿನಾಥನ್, ಜೆ., ಕೆ.ಸಿ.ಎಸ್. ಪಣಿಕರ್ ಹಾಗೂ ಈಗ ನಮ್ಮೊಂದಿಗೆ ಇರುವ ಕೆ.ಜಿ. ಸುಬ್ರಮಣಿಯನ್ ಮುಖ್ಯವಾಗಿ ನೆನಪಾಗುತ್ತಾರೆ. ಆದಿಮದೃಶ್ಯ ಕಲೆಯಲ್ಲಿ ಮಾಂತ್ರಿಕನ ಪಾತ್ರ ಬಹುಮುಖ್ಯವಾಗಿತ್ತು; ನಮ್ಮ ಮುತ್ತಾತಂದಿರ ಕೊಡುಗೆಯನ್ನು ಮರೆಯಲಾದೀತೆ? ಕೆ.ಜಿ. ಸುಬ್ರಮಣಿಯನ್ ಅವರು ಆ ಪರಂಪರೆಯ ಕೊಂಡಿಯಂತೆ ಕಾಣುತ್ತಾರೆ. ಕೆ.ಜಿ. ಸುಬ್ರಮಣಿಯನ್ ಕುರಿತು ಪರಂಪರೆಯ ಬಗ್ಗೆ ಮಾತನಾಡುವಾಗ ಬಂಗಾಳ ಕಲಾವಿದರ 'ಪುನರುಜ್ಜೀವನ' ದೃಷ್ಟಿಯೊಂದಿಗೆ ಹೋಲಿಸಲಾಗದು. ಕೆ.ಜಿ.ಎಸ್. ನಮ್ಮ ದೃಶ್ಯಕಲೆಯ ಪೂರ್ವಸೂರಿಗಳ/ಸಂಪ್ರದಾಯ ಮೂಲಗಳನ್ನು ಅರಗಿಸಿಕೊಂಡು ವೈಯಕ್ತಿಕ ಅಭಿವ್ಯಕ್ತಿಗೆ ಪೂರಕವಾಗಿಸಿಕೊಂಡವರು. ಆದರೆ ಅವರಿಗೂ ಹಿಂದಿನ ಸಂದರ್ಭದ ಬಂಗಾಳದ 'ಪುನರುಜ್ಜೀವನ' ಕಲಾವಿದರು ಪರಂಪರೆಯನ್ನು ಉಳಿಸಿ, ಬೆಳೆಸಲು ನಕಲು ಮಾಡುತ್ತ ಅವರ ಸಮಕಾಲೀನತೆಯನ್ನು ನಿರ್ಲಕ್ಷಿಸಿದವರು. ಹಾಗೆ ನೋಡಿದರೆ ಅಪೂರ್ವಕೊಡುಗೆಯ ಕುಮಾರಸ್ವಾಮಿಯವರೂ ಅವರೊಟ್ಟಿಗೇ ಇದ್ದವರು. ಹೀಗಾಗಿಯೇ ತಮ್ಮ Moving Focus (1978) ನಲ್ಲಿ ಕೆ.ಜಿ. ಸುಬ್ರಮಣಿಯನ್ ಈ ಬಗ್ಗೆ ಪ್ರಸ್ತಾಪಿಸುತ್ತಾರೆ. ಕೆ.ಜಿ.ಎಸ್. ತಮ್ಮ ಅಭಿವ್ಯಕ್ತಿ/ಕಲೆಯನ್ನು Idealistic ಆಗಿ ನೋಡಲಿಲ್ಲ; ನಾವು ಇಡೀ ವಿಶ್ವಕ್ಕೆ ಸೇರಿದವರು; ನಮ್ಮ ಭಾಷೆಯೂ ವಿಶ್ವಾತ್ಮಕವೇ ಆಗಿರಬೇಕೆಂದು ಭಾವಿಸುವವರು. ನಮ್ಮ ಪರಂಪರೆಯ ಉತ್ತರಾಧಿಕಾರಿಗಳಾಗಿಯೂ ತಮ್ಮತನವನ್ನೂ ಸಾಧಿಸಬೇಕೆಂಬ ದೃಷ್ಟಿಯು ಕೆ.ಜಿ.ಎಸ್. ರವರ ಸೃಷ್ಟಿಯ ದೃಶ್ಯಲೋಕದಲ್ಲಿದೆ. ಕಳೆದ ವರ್ಷ ಬೆಂಗಳೂರಿನ ರಾಷ್ಟ್ರೀಯ ಆಧುನಿಕ ಕಲಾಗ್ಯಾಲರಿಯಲ್ಲಿ (NGMA) ಅವರ 'New works' ಶೀರ್ಷಿಕೆಯಡಿಯಲ್ಲಿ ವೈವಿಧ್ಯಮಯ ಚಿತ್ರಕೃತಿಗಳು (ನವಂಬರ್ 30ರಿಂದ ಡಿಸೆಂಬರ್ 28, 2014) ಪ್ರದರ್ಶಿಸಲ್ಪಟ್ಟವು.

ಪ್ರದರ್ಶನದಲ್ಲಿ ನಮ್ಮ ಪರಂಪರೆಯ ವಾರಸುದಾರರಂತೆ ಕಾಣುವ ಕೆ.ಜಿ.ಎಸ್. 'ಹೊಸ ಕೃತಿಗಳು' ಎಂದು ಹೇಳಿಕೊಂಡಿರುವುದರ ಹಿನ್ನಲೆ




**ಕೆ.ಜಿ.ಎಸ್. ಅವರ ಕಲಾಕೃತಿ**

ಮುನ್ನೆಲೆಗಳಿಗೆ ಹಲವು ಕಾರಣಗಳೂ  ಇರಬಹುದು. ಈ ಮೊದಲೇ ಅವರನ್ನು ಕಲೆಯ ಮಾಂತ್ರಿಕನಿಗೆ ಹೋಲಿಸಲಾಗಿದೆಯಷ್ಟೇ. ಅವರಿಂದ ಸಹಜವಾಗಿ ಸೃಷ್ಟಿಯಾಗುವ ಕೃತಿಗಳು ಬಹುಸಂಖ್ಯಾತವೇ ಆಗಿರುತ್ತವೆ. ಇಂಥದ್ದನ್ನು ಚಿತ್ರಿಸಬೇಕೆಂದು ಅಂದುಕೊಂಡು ಪ್ರಾರಂಭಿಸಿದರೂ ಹಲವು ಬದಲಾವಣೆ, ರೂಪಾಂತರಗಳಿಗೆ ಒಳಗಾಗಿ ಬೇರೆಯೇ ಆದ ರೂಪಗಳು ಚಿತ್ರಿತ ಅವಕಾಶದಲ್ಲಿ ಕಾಣಿಸಿಕೊಳ್ಳುವ, ಆ ಮುನ್ನಿನ ಕಲ್ಪನೆಯೇ ಪಲ್ಲಟಗೊಳ್ಳುವ, ಸಾಧ್ಯತೆಗಳ ಅಪೂರ್ವ ಕಲಾವಿದ ಅವರು ಹಾಗಾಗಿಯೇ ಏಕ ಕಾಲಕ್ಕೆ ಪುಟ್ಟಪುಟ್ಟ ಮಕ್ಕಳನ್ನೂ, ವಯಸ್ಕರನ್ನೂ ಅವರು ರಂಜಿಸಬಲ್ಲರು, ಅವರ ಗ್ರಾಫಿಕ್ ಕಥಾನಕಗಳ ವಿಶಿಷ್ಟ ಪ್ರಾಣಿ ಪಕ್ಷಿಗಳ ಕಪ್ಪು ರೂಪಗಳ ಗಾಢ ಪ್ರಭಾವದಿಂದ ನಾವು ತಪ್ಪಿಸಿಕೊಳ್ಳಲಾದೀತೆ? ಇಂತಹ ಸಚಿತ್ರಮಯ ಪುಸ್ತಕಗಳು 1969ರಿಂದಲೇ ಅವರಿಂದ ಮೂಡಿಬಂದಿವೆ.ಬಣ್ಣಬಣ್ಣದ ಕಥಾಚಿತ್ರ ಪುಸ್ತಕಗಳೂ ಬಂದವು. When God First made the animals He made them All Alike (1969), the Butterfly and the cricket (1972), the king and the little man (1974), How Hanu Became Hanuman, Death in Eden, In the Zoo (1995,1995), the Tale of the talking Face (1998) ದೇಶದ ಗಮನ ಸೆಳೆದವು. ೯೦ರ ದಶಕದಲ್ಲಿಯೇ ವಿಶಿಷ್ಟ ಪುಸ್ತಕಗಳನ್ನು ಕಲಾಯಾತ್ರಾ ಗ್ಯಾಲರಿಯ ಸಾರಾಏಬ್ರಹಾಂ ನಮಗೆಲ್ಲಾ ತಲುಪಿಸಿದ್ದರು ! ಸುಬ್ರಮಣಿಯನ್‌ರ

ದೃಷ್ಟಿಯನ್ನು ಗಮನಿಸಿ. ಅವರ ಪ್ರೌಢ ದೃಶ್ಯಕಲಾ ಸಾಹಿತ್ಯಕ ಪುಸ್ತಕಗಳಾದ The Creative Circuit (1992), The Magic of Making (2007) ಗಳ ಮೂಲಕವೇ ಅಲ್ಲದೆ. ಸಚಿತ್ರ ಪುಟ್ಟ ಪುಸ್ತಕಗಳ ಮೂಲಕವೂ ಬಹು ಸಂಖ್ಯೆಯ ಮನಸ್ಸುಗಳನ್ನು ಮುಟ್ಟಿದವರು ಅವರು. ಈ ಮುಟ್ಟುವಿಕೆಗೆ ಹಿನ್ನೆಲೆಯಾಗಿ ಅವರ ಅಪೂರ್ವ ಬದುಕೂ ಇದೆ. ಕೇರಳದಲ್ಲಿ ಹುಟ್ಟಿ ಗಾಂಧಿ ತಾತ್ವಿಕತೆಯ ಚಳುವಳಿಯಲ್ಲಿ ಧುಮುಕಿ ಜೈಲುವಾಸಿಯಾದದ್ದೇ ಅಲ್ಲದೆ ಮದ್ರಾಸಿನ ಕಾಲೇಜಿನಿಂದಲೂ ಹೊರಹಾಕಲ್ಪಟ್ಟು 1944ರಲ್ಲಿ ಶಾಂತಿನಿಕೇತನ ಸೇರಿಕೊಂಡವರು; ಗಾಂಧಿಯ ಪ್ರಭಾವಲಯದಿಂದ ರವೀಂದ್ರನಾಥರ ಕಕ್ಷೆಗೆ ಸೇರಿಕೊಂಡರು. ಗೊಂಬೆಗಳನ್ನೇ ಅಲ್ಲದೆ ಕುಂಬಕಲೆಯ ಜತೆಜತೆಗೇ ಸಾಂದರ್ಭಿಕ ಚಿತ್ರ ವಿನ್ಯಾಸ, ಟೆರಾಕೋಟಾ ಉಬ್ಬು ಶಿಲ್ಪಗಳನ್ನೂ ಚಿತ್ರ ಮತ್ತು ಭಿತ್ತಿಚಿತ್ರಗಳನ್ನೂ ಸೃಷ್ಟಿಸಿದ ಅವರು ಇಂದಿಗೂ ಜೀವಂತಿಕೆಯ ಹಲವು ಸೃಷ್ಟಿ ಪ್ರಕಾರಗಳಲ್ಲಿ ಅಭಿವ್ಯಕ್ತಿಸುತ್ತ ನಡೆದಿದ್ದಾರೆ.

ವ್ಯಂಗ್ಯವಿಡಂಬನೆಗಳ ಜತೆಜತೆಗೇ ನಗ್ನತೆ, ಸಮಾಜದ ತೀಕ್ಷ್ಣವಿಮರ್ಶೆ, ವಿವರಗಳೂ ಅವರ ಪೌರಾಣಿಕ, ಸಾಮಾಜಿಕ ರೂಪ–ರೂಪಕಗಳ ರೂಪಾಂತರಿತ ದೃಶ್ಯಕಲ್ಪನೆಗಳು ಅನನ್ಯವಾಗಿವೆ. 'A painting cannot do all that a written text can' ಎಂಬ ದೃಷ್ಟಿಯ ಕೆಜಿಎಸ್ ಅವರು ವೈಯಕ್ತಿಕವಾಗಿ ಅವರ ದೃಶ್ಯಕಲಾ ಸೃಷ್ಟಿಗಿಂತಲೂ ಅವರ ದೃಶ್ಯಕಲಾ ಬರಹಗಳು ಹಾಗೂ ಕಾವ್ಯವೇ ನನ್ನಂತಹ ಹಲವರಿಗೆ ಅಚ್ಚುಮೆಚ್ಚು. ಆದರೂ ಅವರ ಅನಾಯಾಸ ಕಲಾಸೃಷ್ಟಿಯ ಮಾಂತ್ರಿಕತೆಯು ಯಾರನ್ನೂ ಕಾಡದೆ ಬಿಡದು. ಈ ಪ್ರಭಾವದ ನಡುವೆಯೂ ಪುನರಜ್ಜೀವನ ಸಂದರ್ಭದ ಬಂಗಾಳಾ ಕಲಾವಿದರು ಹಾಗೂ ಮುಂಬಯಿಯ Progressive painters ಸಂದರ್ಭಗಳನ್ನು ಪರಸ್ಪರ ಮುಖಾಮುಖಿಯಾಗಿಸಿ ನೋಡಿ. ಕೆ.ಜಿ.ಎಸ್.ರವರ ಹಾಗೆ ಆತ್ಯಂತಿಕ ನಿಷ್ಕೃಷ್ಟತೆಯಿಂದ ಬಹುಷ: ಯಾರೂ ಬರೆದಿಲ್ಲ, ಆನಂದ ಕುಮಾರ ಸ್ವಾಮಿಯವರ ಕೆಲವು ದೃಷ್ಟಿಗಳನ್ನು ಅವರ ಸಮಕಾಲೀನರು ಪ್ರಶ್ನಿಸಬೇಕಿತ್ತೆಂದೂ ಕೆ.ಜಿ.ಎಸ್ (Moving Focus, 1978) ಹೇಳುತ್ತಾರೆ. ಈ ನೆನಪುಗಳ ಕಾಡುವಿಕೆಯ ನಡುವೆಯೇ 2013–14ರಲ್ಲಿ ಸೃಷ್ಟಿಯಾದ ಅವರ ಹೊಸ ಕೃತಿಗಳು ಮುಖಾಮುಖಿಯಾಗುತ್ತವೆ.

ವಿಕೃತಿ ಸೌಂದರ್ಯ ಮೀಮಾಂಸೆಯ ಪ್ರಬಲವಾದಿಗಳಂತೆ ಕಾಣುವ ಅವರು ತಮ್ಮ ರೂಪಗಳನ್ನು ವಿಕೃತಿಗೊಳಿಸಿ, ರೂಪಕಗಳ ಮೆರವಣಿಗೆ ಮಾಡುತ್ತಲೇ ಪುರಾಣಗಳ ದೇವದೇವಿಯರೇ ಅಲ್ಲದೆ ಜನಸಾಮಾನ್ಯರನ್ನು ರೇಖೆ–ಬಣ್ಣಗಳ ಆಟ–ಮಾಟಗಳೊಂದಿಗೆ ಅವಕಾಶದಲ್ಲಿ ಅಡ್ಡಾಡಿಸಿದ್ದಾರೆ.

ಮತ್ಸ್ಯಾವತಾರ ಮೂಲದ 'Fish Icon', ' Icon on Horse back', ಕಾಳಿ ಹಾಗೆಯೇ ಮುಂದುವರಿದ ಪುರಾಣ ರೂಪಗಳ ಸಮಕಾಲೀನ ರೂಪಾಂತರದ ವ್ಯಂಗ್ಯ ವಿಡಂಬನಾಲೋಕ Still life ಅನ್ನೂ ಅರಗಿಸಿಕೊಂಡಿದೆ. ಟೇಬಲ್ ಕೆಳಗೆ ಗಾಬರಿಗೊಂಡ ಗಂಡಿನ ಭಾವಚಿತ್ರವೂ ಬಿದ್ದಿದೆ. Icon big and small ನಲ್ಲಿ ಕಾಳಿಯ ರುದ್ರಾವತಾರ ಸಮಕಾಲೀನ ಗಂಡಿನ ಹರಣ ಹಲವು ರಸ–ಭಾವಗಳನ್ನು ಉಂಟು ಮಾಡುತ್ತದೆ.

Dancing Icon ಕೃತಿಯಲ್ಲಿ Still life ಜತೆಜತೆಗೇ ಸಂಗಮಗೊಂಡ Canvas ವರ್ಣಚಿತ್ರವೊಂದರಲ್ಲಿ ಗಂಡಿನ ಲೈಂಗಿಕ ಹುಚ್ಚಿನ ಕುಣಿತದ ಜತೆಜತೆಗೇ ಕ್ಯಾನ್‌ವಾಸ್‌ನ ಆಚೆಈಚೆ ಹೆಣ್ಣಿನ ರೂಪಗಳ ಆಟವೂ ಇದೆ. ಕೆಳಗೆ ರೂಪಕದಂತೆ ಕೆಂಪು ನಾಯಿಗಳು !

ಚಿತ್ರಾವಕಾಶದಲ್ಲಿ 'Flying Devi' ಯನ್ನು ಹೊಂದಿಸಿ, ದೇವಿಯ ವಾಹನಗಳನ್ನು ಗೋಳಾಡಿಸುವಂತೆ ಲೇವಡಿಸಿರುವ ಕೆ.ಜಿ.ಎಸ್. Speaking Tree ಕೃತಿಯ ಆಕ್ರಲಿಕ್ ಹಾಳೆಯ ಹಿಮ್ಮೊಗದ ಚಿತ್ರಿಸುವಿಕೆಯಲ್ಲಿ ಪರಂಪರೆಯ ಕಲ್ಪವೃಕ್ಷದ ಕಲ್ಪನೆಯ ಮೂಲ ಮೀರಿದ ಸಮಕಾಲೀನ ಬದುಕಿನ ವಿಕೃತಿ ಸೌಂದರ್ಯವನ್ನು, ಆಘಾತಮಯ ಸಂವೇದನೆಯನ್ನು ಅಲುಗಾಡಿಸುವಂತೆ ಚಿತ್ರ, ಚಿತ್ರಾಂಶಗಳು ಸಂಯೋಜನೆಗೊಂಡಿವೆ. ಸಮಕಾಲೀನ ವೈರುಧ್ಯಮಯ, ದ್ವಂದ್ವ ವ್ಯಕ್ತಿತ್ವಗಳು ವಿಕೃತಿಗೊಂಡಿವೆ ಅಥವಾ ನಿರಚನೆ (deconstruct) ಗೊಂಡಿವೆ. ಭಾರತೀಯ ಬದುಕಿನ Biographyಯೂ ಇಂತಹ ಕೃತಿಗಳು ಆಗಬಲ್ಲವು, ಬಹುಷಃ ನಮ್ಮ ಸಂದರ್ಭದಲ್ಲಿ ಕೆ.ಜಿ.ಎಸ್.ರಂತೆ ವೈವಿಧ್ಯಮಯ ಆಟವನ್ನೂ ಆಕ್ರಿಲಿಕ್ ಹಾಳೆಯ ಹಿಮ್ಮೊಗ ಚಿತ್ರಣದಲ್ಲಿ ಇತರರು ಆಡಿದಂತೆ ಕಾಣುವುದಿಲ್ಲ. ಅವರ 'ಮಣಿ' ಎಂಬುವ ತಮಿಳನಂತೆ ಕಾಣುವ ಮಲಯಾಳಂ ಸಹಿಯ ರಾಜಕಾರಣವೂ ಚರ್ಚೆಗೆ ಯೋಗ್ಯವೇ ಆಗಿದೆ.

ಹುಸೇನ್ ಕೇರಳದಲ್ಲಿ ಮಲಯಾಳಂ ಭಾಷೆಯಲ್ಲಿ, ಬೆಂಗಳೂರಿನಲ್ಲಿ ಕನ್ನಡ ಭಾಷೆಯಲ್ಲಿ, ಇತರೆ ರಾಜ್ಯಗಳಲ್ಲಿ ಇಂಗ್ಲೀಷ್, ಹಿಂದಿಯಲ್ಲಿ ಸಹಿ ಮಾಡಿದರೆ. ವೆಂಕಟಪ್ಪನವರು 1913ರಲ್ಲಿ ಕುಮಾರ ಸ್ವಾಮಿಯವರಿಗೆ ಚಿತ್ರಿಸಿಕೊಟ್ಟ ರಾಮಾಯಣದ ಹಲವು ಚಿತ್ರಗಳಲ್ಲಿ ಕನ್ನಡದಲ್ಲಿ ಸಹಿಮಾಡಿದ್ದಾರೆ. ನಂತರ ಮೈಸೂರಿಗೆ ಬಂದ ನಂತರ ವಸಾಹತು ಶಾಹಿ ಪ್ರಭಾವ/ಆರಮನೆಯ ವಾತಾವರಣದಲ್ಲಿ ಇಂಗ್ಲೀಷ್‌ನಲ್ಲಿ ಸಹಿ ಮಾಡಿದ್ದಾರೆ. ಪ್ರಸ್ತುತ ಬೆಂಗಳೂರಿನ ವೆಂಕಟಪ್ಪ ಕಲಾಶಾಲೆಯ ಅವರ ಎಲ್ಲ ಕೃತಿಗಳಲ್ಲಿಯೂ ಇಂಗ್ಲೀಷ್ ಸಹಿಯೆ ಇದೆ. ಇದೊಂದು ವಿಶಿಷ್ಟ ಸಹಿಯ ರಾಜಕಾರಣವೇ ಸರಿ. ಕೆ.ಜಿ.ಎಸ್. ಮೊದಲಿನಿಂದಲೂ ಒಂದೇ ಭಾಷೆಯಲ್ಲಿ ಸಹಿಮಾಡುತ್ತಿದ್ದಾರೆ !

2013ರ ಅವರ Visions of Victory ಯಲ್ಲಿ ಮಹಿಶಾಸುರ ಮರ್ದಿನಿ, ಶಕ್ತಿ ಅಥವಾ ಕಾಳಿಯ ರೂಪವು. ಪಟಚಿತ್ರಗಳ ರೂಪದಂತೆ ಕಂಡರೆ, ಮಾಂಸಾಹಾರಿ ಪ್ರಾಣಿಗಳು ಒಂದನ್ನೊಂದು ತಿಂದು ಬದುಕುವ ಪ್ರಕೃತಿಸಹಜನೋಟಗಳ ಜತೆಗೆ ಕಾಳಿ ತನ್ನವಾಹನದೊಂದಿಗೆ ಠೀವಿಯಿಂದ ನಮ್ಮತ್ತ ನೋಡುತ್ತಿರುವಂತೆ ಚಿತ್ರಸಲಾಗಿದೆ. Dubious Encountersನಲ್ಲಿ ಹೆಣ್ಣು ಗಂಡಿನೊಂದಿಗೆ, ಗಂಡು ಹೆಣ್ಣಿನೊಂದಿಗೆ, ಪ್ರಾಣಿ-ಪಕ್ಷಿಗಳೊಂದಿಗೆ ಹೀಗೆ ಹಲವು ರೀತಿಯ ಪ್ರತಿಭಟನೆ, ಹೋರಾಟಗಳ ನೋಟ ಇದೆ. ಇಲ್ಲಿ ಆದಿಮ (Primitive) ಸಂಸ್ಕೃತಿಯ ಬೇಟೆ, ಮುಖವಾಡಗಳು, ಮನುಷ್ಯ-ಪ್ರಾಣಿ, ಪ್ರಾಣಿ-ಮನುಷ್ಯರ ಬೇಟೆಗಳ ನೆನಪೂ ಬಂದುಹೋಗುತ್ತದೆ. ಪುರಾಣಗಳ ಕಾಳಿ ಸಿಂಹವಾಹನೆಯಾದರೂ ಸಮಕಾಲೀನ ಬದುಕಿನ

ಹೆಣ್ಣುಗಂಡು ಸಿಂಹಗಳ ಜತೆ, ಗಂಡು ಹೆಣ್ಣುಗಳ ಜತೆಯೂ ಹೋರಾಟ ನಡೆಸುತ್ತಿರುವ ಸಂದರ್ಭ ನಮ್ಮದೇ ಅಲ್ಲವೇ?! Devi 1,2, Durga, Kamadhenu, ವಿಶಿಷ್ಟ ರೀತಿಯಲ್ಲಿ ವಿಕೃತಿಯನ್ನೂ ಸುಂದರವಾಗಿಸಿ ಕೊಂಡಿವೆ. ಮಡೋನ ಮತ್ತು ಅನುಸೂಯಾಳನ್ನೂ ಹಲಗೆಯ ಅವಕಾಶದಲ್ಲಿ ಚಿತ್ರಿಸಿದ್ದಾರೆ. ಸ್ವಚ್ಛಂದ ಛಂದಸ್ಸಿನಂತೆ ಚಿತ್ರಿಸುವ ಸಾಮರ್ಥ್ಯದ ಕೆ.ಜಿ.ಎಸ್. ನಿನ್ನೆ ಮತ್ತು ಇಂದಿನ ಪ್ರಜ್ಞೆಗಳ ನಿರಚನೆಯಂತೆ ಅಭಿವ್ಯಕ್ತಿಸುತ್ತಾರೆ. ಹೊಸತನ್ನು ಕಾಣುತ್ತಾರೆ. ಹಾಗಾಗಿಯೇ ಕಾಳಿಯ ಪೌರಾಣಿಕ ಲಕ್ಷಣಗಳನ್ನು ಸಮಕಾಲೀನ ಹೆಣ್ಣಾಗಿ ರೂಪಾಂತರಿಸಿ ತೋರಿಸುತ್ತಾರೆ. ಪುರಾಣ ಮತ್ತು ಸಮಕಾಲೀನ ಸಂದರ್ಭಗಳೆರಡರ ಸಂಧಿಕಾರ್ಯವನ್ನು ಸಾಧಿಸುತ್ತಾರೆ. ನವರಸಗಳಿಗೆ ಸಂಗೀತದಲ್ಲಿ ರಾಗಗಳಿರುವಂತೆ ಬಣ್ಣಗಳು, ರೂಪಗಳೂ ದೃಶ್ಯಕಲೆಯಲ್ಲಿವೆ. ಕೆ.ಜಿ.ಎಸ್. ದೃಶ್ಯ ಅಂಶಗಳಿಗೆ ಆಡಲು ವಿಶಿಷ್ಟ ಭೂಮಿಕೆ, ಪಾತ್ರ, ರೂಪ, ರೇಖೆ, ಬಣ್ಣಗಳನ್ನು ನೀಡುತ್ತಾರೆ. ಹನುಮಂತನು ವ್ಯಂಗ್ಯ, ಭವ್ಯ ನಾಯಕತ್ವದ ಲಕ್ಷಣಗಳನ್ನು ಹೊಂದಿರುವಂತೆಯೇ ದುರ್ಗೆಯ ರೂಪವು ರೌದ್ರತೆಯ ರೂಪಕವೇ ಅಲ್ಲದೆ ಹೆಣ್ಣಿನ ಹಲವು ಭಾವ ಅನುಭಾವಗಳಿಗೆ ರೂಪಕವೂ ಆಗಿದೆ. ಎಷ್ಟು ಪ್ರಶ್ನೆಗಳನ್ನು ಕೇಳಿದರೆ, ಅಷ್ಟು ಉತ್ತರಗಳನ್ನು ಈ ಚಿತ್ರಕೃತಿಗಳು ನೀಡಬಲ್ಲವು. ಆದರೆ ಕೆ.ಜಿ.ಎಸ್. ಹೇಳಿಕೊಂಡಿರುವಂತೆ ಎಲ್ಲ ರೂಪಗಳಿಗೂ ವಿವರಣೆ ಕೊಡಲಾರಂಭಿಸಿದರೆ' ... It will destroy the mystery of its birth'' ಎನ್ನುತ್ತಾರೆ. ಅವರ ರೂಪಗಳು ಕಾಲ್ಪನಿಕ ಲೋಕದಿಂದ ನಮ್ಮ ನೈಜ ಬದುಕಿಗೂ ಹೊಂದಿಕೊಳ್ಳಬಲ್ಲವು. ಹಾಗಾಗಿಯೇ ಅವರು 'I am a fabulist, I transform images, change their character, make them float, fly, perform, tell a visval story ಎಂದೂ ಹೇಳಿಕೊಂಡಿದ್ದಾರೆ. ಅವರ ದೃಷ್ಟಿಯಲ್ಲಿ ಕಲಾಕೃತಿಯೊಂದರ ಸೃಷ್ಟಿಯು ಆಗುವಿಕೆಗಿಂತಲೂ 'ಮಾಡುವಿಕೆ' ಎನ್ನುತ್ತಾರೆ. ಅವರ ಸೃಷ್ಟಿಪ್ರಕ್ರಿಯೆಯನ್ನು ಮಾಡುವಿಕೆಯ ಮಾಟದ ಆಟ ಎನ್ನಬಹುದೇ? ಈ ದೃಷ್ಟಿಯೂ ಪರಂಪರೆಯ ಆದಿಮ ಪ್ರಜ್ಞೆಯ ಮರುಕಳಿಕೆಯಂತೆ ಕಾಣುತ್ತದೆಯೆ? ಇತ್ತೀಚೆಗೆ ನಡೆದ ೮ನೆಯ ಬೆಂಗಳೂರು ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ ಆದಿಮಪ್ರಜ್ಞೆ ಕಾಡುವಿಕೆಯ ಆಸ್ಟ್ರೇಲಿಯಾದ 'ತನ್ನಾ' ಎಂಬ ಚಿತ್ರ ಮತ್ತು ಕೊಲಂಬಿಯಾದ ಕೈರೋಗುಎರ್ರಾ ನಿರ್ದೇಶಿತ 'ಎಂಬ್ರೇಸ್ ಆಫ್ ದಿ ಸರ್ಪೆಂಟ್' ಚಿತ್ರಗಳು ಪ್ರದರ್ಶಿತಗೊಂಡು ವೀಕ್ಷಕರನ್ನು ಕಾಡಿದ್ದುಂಟು. ಕೆ.ಜಿ.ಎಸ್.ರವರಿಗೆ ಪ್ರತಿದಿನವೂ ಹಬ್ಬ; ಸಂಭ್ರಮ; ಎಲ್ಲವೂ ಹೊಸದಾಗಿಯೇ ಕಾಣುತ್ತದೆ. ಹಾಗಾಗಿ ಅವರೊಬ್ಬ ಸಮಕಾಲೀನ ದೃಶ್ಯಕಲೆಯ ಆದಿಮ ಮಾಂತ್ರಿಕನಂತೆ ನನಗೆ ಕಾಣುತ್ತಾರೆ.

---

*ಹೆಚ್ಚಿನ ಒಳನೋಟಗಳಿಗಾಗಿ Seagull Foundation ಪ್ರಕಾಶಿತ 2014ರ New works: K.G. Subramanyan' ಪ್ರಕಟಣೆಯನ್ನು ಗಮನಿಸಿ.*

## ಡಾ. ವಿ.ಟಿ. ಕಾಳೆ ಅವರಿಗೆ 2014ರ ಸಾಲಿನ ವೆಂಕಟಪ್ಪ ಪ್ರಶಸ್ತಿ ಗರಿ

**ನಾ**ಡಿನ ಚಿತ್ರಕಲಾ ವಲಯಕ್ಕೆ ತಮ್ಮದೇ ವಿಶಿಷ್ಟ ಕೊಡುಗೆ ನೀಡಿರುವ ಚಿತ್ರಕಲಾವಿದ, ನಾಡೋಜ ಡಾ. ವಿ.ಟಿ. ಕಾಳೆ ಅವರಿಗೆ ದೃಶ್ಯ ಕಲಾವಲಯದ ಪ್ರತಿಷ್ಠಿತ ಪ್ರಶಸ್ತಿಯೆಂದೇ ಪರಿಗಣಿಸಲ್ಪಟ್ಟಿರುವ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ದೊರೆತಿದೆ.

ಅವಿಭಜಿತ ಬಿಜಾಪುರ ಜಿಲ್ಲೆಯವರಾದ, ರೈತ ಕುಟುಂಬದ ಕುಡಿ ವಿ.ಟಿ.ಕಾಳೆ ಅವರು ಆರು ದಶಕಕ್ಕೂ ಹೆಚ್ಚು ಕಾಲದಿಂದ ಕಲಾವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಕಲಾಜೀವಿ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ, ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವ ವಿ.ಟಿ. ಕಾಳೆ ಅವರು ನಾಡೋಜ ಪ್ರಶಸ್ತಿ ಪುರಸ್ಕೃತರು. ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್‌ಗೆ ಭಾಜನರಾಗಿರುವ ಪ್ರತಿಭೆ. ಕಾಳೆ ಅವರ ಸಾಧನೆಯ ಕಿರೀಟಕ್ಕೆ



ಡಾ. ವಿ.ಟಿ. ಕಾಳೆ ಅವರಿಗೆ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಪ್ರದಾನವಾದ ಸಂದರ್ಭ

ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಹೊಸ ಗರಿಯಾಗಿದ್ದು ಮೆರುಗು ತಂದಿದೆ. ಈ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದ ಸಾಧಕರಲ್ಲಿ ಡಾ.ವಿ.ಟಿ. ಕಾಳೆ ಅವರು 21ನೇಯವರು.

## ಗೌರವಾರ್ಪಣೆ

ವೆಂಕಟಪ್ಪ ಪ್ರಶಸ್ತಿ ಪುರಸ್ಕೃತರಾದ ಡಾ. ವಿ.ಟಿ.ಕಾಳೆ ಅವರನ್ನು ಕರ್ನಾಟಕ ಲಲಿತ ಕಲಾ ಅಕಾಡೆಮಿಗೆ ಬರಮಾಡಿಕೊಂಡು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಕಾಳೆ ಅವರಿಗೆ ಗೌರವಾರ್ಪಣೆ ಮಾಡಿ ಕಾಳೆ ಅವರ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್, ಕಲಾವಿದರು, ಸದಸ್ಯರು ಹಾಜರಿದ್ದರು.

ಆನಂತರ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಸರ್ಕಾರ ವಿವಿಧ ಕ್ಷೇತ್ರಗಳ ಸಾಧಕರಿಗೆ ಕೊಡಮಾಡುವ ವಿವಿಧ ಪ್ರಶಸ್ತಿಗಳ ಜೊತೆಗೆ ನಾಡೋಜ ಡಾ.ವಿ.ಟಿ.ಕಾಳೆ ಅವರಿಗೆ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಿದರು.

■




### ಅಭಿನಂದನೆ

ಕರ್ನಾಟಕದ ಕಲಾವಿದ ಹಾಗೂ ಛಾಯಾಗ್ರಾಹಕ ಮಂಜುನಾಥ್ ಕಲ್ಲೇದೇವರು ಅವರ ಕಲಾಕೃತಿ ಕೇಂದ್ರ ಲಲಿತಕಲಾ ಅಕಾಡೆಮಿಯ 56ನೇ ಕಲಾಪ್ರದರ್ಶನದಲ್ಲಿ ಪ್ರಶಸ್ತಿಗೆ ಪಾತ್ರವಾಗಿರುವುದು ಸಂತಸದ ಸಂಗತಿ. ಮಂಜುನಾಥ್ ಅವರನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಅಭಿನಂದಿಸುತ್ತದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಕಲಾಪರಿಚಾರಿಕೆಯಲ್ಲಿ ಸದಾ ತೊಡಗಿಸಿಕೊಂಡಿದ್ದು ನಿರಂತರವಾಗಿ ರಾಜ್ಯದ ವಿವಿಧೆಡೆ ಕಲಾಶಿಬಿರ, ವಿಚಾರ ಸಂಕಿರಣ, ತಿಂಗಳ ಚಿತ್ರ, ತಿಂಗಳ ಕಲಾವಿದರು, ಪಡಸಾಲೆ ತಿಂಗಳ ಚಿತ್ರ ಮುಂತಾದ ಕಾರ್ಯಕ್ರಮವನ್ನು ನಡೆಸುವ ಮೂಲಕ ಕಲಾಪರಿಚಾರಿಕೆಯ ಪರಿಕಲ್ಪನೆಯನ್ನು ವಿಸ್ತಾರಗೊಳಿಸಿದೆ. ಮೂರು ತಿಂಗಳ ಅವಧಿಯಲ್ಲಿ ಅಕಾಡೆಮಿ ನೇತೃತ್ವ, ಸಹಯೋಗ ಮತ್ತು ಸಹಭಾಗಿತ್ವದಲ್ಲಿ ನಡೆದ ಕಾರ್ಯಕ್ರಮಗಳ ಸಂಕ್ಷಿಪ್ತ ನೋಟ ಇಲ್ಲಿದೆ.

## ಮುಂಗಾರು ಕಲಾ ಶಿಬಿರ...

ರಾಜ್ಯ ಮಟ್ಟದ ಕಲಾ ಶಿಬಿರವಾದ **'ಮುಂಗಾರು ಕಲಾ ಶಿಬಿರ'** 2015ರ ಜೂನ್ 30ರಿಂದ ಜುಲೈ 3ರವರೆಗೆ ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದಲ್ಲಿ ನಡೆಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಚಾಮರಾಜನಗರದ 'ವರ್ಣಸಿಂಚನ' ಕಲಾವಿದರ ಬಳಗದ ಸಂಯುಕ್ತ ಆಶ್ರಯದಲ್ಲಿ ನಾಲ್ಕು ದಿನಗಳ ಕಾಲ ಜರುಗಿದ ಈ ಶಿಬಿರದ ಚಾಲನೆಗೆ ಕೊಳ್ಳೇಗಾಲದಲ್ಲಿರುವ ಹಂಪಿ ವಿಶ್ವವಿದ್ಯಾಲಯ ವಿಸ್ತರಣಾ ಕೇಂದ್ರದ ಪ್ರಾಧ್ಯಾಪಕರಾದ ಪ್ರೊ. ಕೇಶವನ್ ಪ್ರಸಾದ್ ಕೆ. ಮರಹಟ್ಟಿ ಮತ್ತಿತರರು ಸಾಕ್ಷಿಯಾದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.



**'ಮುಂಗಾರು ಕಲಾ ಶಿಬಿರ'ದ ಉದ್ಘಾಟನೆಯ ಸವಿಘಳಿಗೆ**



**ಕಲಾವಿದರು ರಚಿಸಿದ ಕಲಾಕೃತಿಗಳನ್ನು ವೀಕ್ಷಿಸುತ್ತಿರುವ ಅಕಾಡೆಮಿ ಅಧ್ಯಕ್ಷರು**

ಬಿಳಿಗಿರಿರಂಗನ ಬೆಟ್ಟದ ಗಿರಿದರ್ಶಿನಿ ಮತ್ತು ಆಕಾಶ್ ಕಾಟೇಜ್‌ನಲ್ಲಿ ಜರುಗಿದ ಕಲಾ ಶಿಬಿರದಲ್ಲಿ ಯಳಂದೂರಿನ ದುಂಡಮಹದೇವಸ್ವಾಮಿ, ಚಾಮರಾಜನಗರದ ಹರೀಶ್ ಕುಮಾರ್.ಎಸ್, ಎಂ. ನಂಜುಂಡಸ್ವಾಮಿ, ಸಿ.ಎನ್. ಸಂಪತ್‌ಕುಮಾರ್, ಮಧುಸೂದನ್, ಮೈಸೂರಿನ ಬಿ.ಎಲ್.ಸೋಮಶೇಖರ್, ಎಲ್.ಶಿವಣ್ಣ, ಶ್ರೀಮತಿ ಎಂ.ಎಲ್.ಮಾಧವಿ, ಎಚ್. ಎನ್. ರವೀಶ್, ತುಮಕೂರಿನ ರಾಧಿಕ ಎನ್.ಜಿ, ಟಿ.ನರಸೀಪುರದ ಟಿ.ಎಸ್.ಮುರಳಿ, ಬೆಂಗಳೂರಿನ ಆರ್.ಜಿ.ಅರ್ಪಿತ, ಕೊಳ್ಳೆಗಾಲದ ಎಸ್ತರ್ ಜಾನ್ಸಿ, ಹಾಸನದ ರಾಮಕೃಷ್ಣನಾಯಕ, ನಂಜನಗೂಡಿನ ಪಿ.ನಾಗ, ಮಳವಳ್ಳಿಯ ಬಿ.ಎನ್.ರಾಜೇಂದ್ರ, ಕಲಬುರ್ಗಿಯ ಮೋಹನ್ ಸೀತನೂರು ಅವರು ಶಿಬಿರಾರ್ಥಿಗಳಾಗಿ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿಕೊಟ್ಟರು.

ಸಮಾರೋಪ ಸಮಾರಂಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಚಾಮರಾಜನಗರ ಜಿಲ್ಲಾಧ್ಯಕ್ಷ ವಿ.ಎನ್.ಸೋಮಶೇಖರ್ ಮೂರ್ತಿ ಅವರು ಸಮಾರೋಪ ಭಾಷಣ ಮಾಡಿದರು. ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

## ‘ಸ್ಪರ್ಶ’ ಚಿತ್ರಕಲಾ ಶಿಬಿರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ಸಹಯೋಗದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ 2015ರ ಜುಲೈ 1ರಿಂದ 4ರವರೆಗೆ **‘ಸ್ಪರ್ಶ’** ರಾಜ್ಯ ಮಟ್ಟದ ಚಿತ್ರಕಲಾ ಶಿಬಿರವನ್ನು ಆಯೋಜಿಸಿತ್ತು.

ಮೈಸೂರು ವಿವಿಯ ಮಾನಸಗಂಗೋತ್ರಿಯಲ್ಲಿ ನಾಲ್ಕು ದಿನಗಳ ಕಾಲ ನಡೆದ ಶಿಬಿರವನ್ನು ತುಮಕೂರಿನ ಸಾಹಿತಿಗಳಾದ ಶ್ರೀ ತುಂಬಾಡಿ ರಾಮಯ್ಯ ಅವರು ಉದ್ಘಾಟಿಸಿದರು.



**'ಸ್ಪರ್ಶ' ಚಿತ್ರಕಲಾ ಶಿಬಿರಕ್ಕೆ ಚಾಲನೆ ದೊರೆತ ಸಂದರ್ಭ**

ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ಸಂಯೋಜನಾಧಿಕಾರಿ ಡಾ. ಎಸ್.ನರೇಂದ್ರ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರೆ, ಮೈಸೂರು ವಿವಿಯ ಡಾ. ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಕಾಳೇಗೌಡ ನಾಗವಾರ ಅವರು ಆಶಯ ಭಾಷಣ ಮಾಡಿದರು. ವಿವಿಯ ಮಾಜಿ ಸಿಂಡಿಕೇಟ್ ಸದಸ್ಯರಾದ ಪ್ರೊ. ವಿ.ಎಂ. ಪಾರ್ವತಮ್ಮ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ. ಎಸ್.ಮೂರ್ತಿ ಅವರು ಅಧ್ಯಕ್ಷತೆ ವಹಿಸಿದ್ದರು.

ಶಿಬಿರದಲ್ಲಿ ಕಲಾವಿದರಾದ ರಾಜೇಂದ್ರ ಪ್ರಸಾದ್ (ಮಂಗಳೂರು), ಶರೀಫ್ ದೇಶಪಾಂಡೆ (ಬೆಳಗಾವಿ), ಗೌತಮ್ ಬಿ. ಅಂದಾನಿ (ಕಲ್ಬುರ್ಗಿ), ಎಂ.ಜೆ.ಬಾಂಗ್ಲೇವಾಲೆ (ಹುಬ್ಬಳ್ಳಿ), ಎಂ.ಸಿ. ಚೆಟ್ಟಿ (ಹುಬ್ಬಳ್ಳಿ), ಅಭಿಜಿತ್ (ಮೈಸೂರು), ರೂಪ ಮಹೇಶ್ (ತುಮಕೂರು), ಈರಣ್ಣ ದಂಡಿನ್ (ಕೋಲಾರ), ಬಿ.ನವೀನ್ ಕುಮಾರ್ (ತುಮಕೂರು), ಮೋಹನ್‌ಕುಮಾರ್ (ಮಂಗಳೂರು), ಬಸವರಾಜ ಎಲ್.ಜಾನೆ (ಕಲಬುರ್ಗಿ), ವಿಷ್ಣುಕುಮಾರ್. ಎಸ್. (ತಿಪಟೂರು), ಕುಮಾರ್ (ಮೈಸೂರು), ಎಚ್.ಎಸ್.ಮಂಜುನಾಥ್ (ಚನ್ನರಾಯಪಟ್ಟಣ), ಚಂದ್ರಶೇಖರ್ (ಹಾಸನ), ರಾಜಕುಮಾರ್ (ಮೈಸೂರು), ರಾಘವೇಂದ್ರ ಎಂ. (ಮೈಸೂರು), ಆಕಾಶ್ ಧರ್ಮಣ್ಣ ವಡ್ಡರ್ (ಕಲಬುರ್ಗಿ), ಸುಂದರ್ ಬಾಬು (ಚಿಕ್ಕಮಗಳೂರು), ವಿಶಾಲ ಮುರುಗೋಡು.ಎಸ್.ಸಿ ಅವರು ಭಾಗವಹಿಸಿ ತಲಾ ಎರಡು ಕಲಾಕೃತಿಗಳನ್ನು ರಚಿಸಿದರು.

ಜುಲೈ 4ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಮೈಸೂರು ವಿವಿಯ ಮಾಜಿ ಸಿಂಡಿಕೇಟ್ ಸದಸ್ಯರು ಹಾಗೂ ಸಮಾಜಶಾಸ್ತ್ರಜ್ಞರಾದ ಪ್ರೊ.



**ಬಾಬಾಸಾಹೇಬ್ ಅಂಬೇಡ್ಕರ್ ಭಾವಚಿತ್ರಕ್ಕೆ ಅಕಾಡೆಮಿ ಅಧ್ಯಕ್ಷರಿಂದ ಪುಷ್ಪನಮನ**

ಕೆ. ಸುಮಿತ್ರಾಬಾಯಿ ಅವರು ಸಮಾರೋಪ ಭಾಷಣ ಮಾಡಿದರು. ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ. ಎಸ್.ಮೂರ್ತಿ ಅವರನ್ನೊಳಗೊಂಡಂತೆ ಹಲವು ಗಣ್ಯರು ಸಮಾರಂಭಕ್ಕೆ ಸಾಕ್ಷಿಯಾದರು.

## 'ಶಬ್ದ–ನಿಶ್ಶಬ್ದ' ಕಲಾಶಿಬಿರ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದೊಂದಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ 2015ರ ಜುಲೈ 10ರಿಂದ 14ರವರೆಗೆ **'ಶಬ್ದ–ನಿಶ್ಶಬ್ದ'** ದೃಶ್ಯ–ಶ್ರವ್ಯ ಕಲಾನುಸಂಧಾನದ ಕಲಾಶಿಬಿರವನ್ನು ಆಯೋಜಿಸಿತ್ತು.

ಕುವೆಂಪು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಜೋಗನ್



**ಕುವೆಂಪು ವಿ.ವಿ. ಕುಲಪತಿಗಳಾದ ಪ್ರೊ. ಜೋಗನ್ ಶಂಕರ್ ಅವರು ಕಲಾಕೃತಿ ರಚಿಸುವ ಮೂಲಕ ಕಲಾಶಿಬಿರಕ್ಕೆ ಚಾಲನೆ**





**ಸಂಗೀತದ ಸುನಾದಕ್ಕೆ ಸಾಕ್ಷಿಯಾದ ಕಲಾವಿದರ ದಂಡು**

ಶಂಕರ್ ಅವರು ಶಿಬಿರಕ್ಕೆ ಚಾಲನೆ ನೀಡಿದರು. ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ. ಎಸ್.ಮೂರ್ತಿ ಅವರು ಶಿಬಿರದ ಆಶಯವನ್ನು ಅಭಿವ್ಯಕ್ತಿಗೊಳಿಸಿದರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರಾದ ಗಂಗಮ್ಮ ಕೇಶವಮೂರ್ತಿ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಆನಂತರ 'ಕಲೆ–ಸಂಗೀತದೊಂದಿಗಿನ ಸಂವಹನ' ಕಾರ್ಯಕ್ರಮ ನಡೆಯಿತು. ಎಸ್.ಬಿ. ಶಿವಲಿಂಗಪ್ಪ ಮತ್ತವರ ತಂಡ ನಾಡಗೀತೆ ಹಾಡಿದರೆ, ಬೆಂಗಳೂರಿನ ಪುಷ್ಪಾ ಕಾಶೀನಾಥ್, ಧಾರವಾಡದ ಅರಣ್ಯಕುಮಾರ್ ಅವರು ಪ್ರತ್ಯೇಕವಾಗಿ ವೀಣಾ ವಾದನ ಮತ್ತು ಸಿತಾರ್ ವಾದನದ ಮೂಲಕ ಕೇಳುಗರ ಮನ ಪುಳಕಗೊಳಿಸಿದರು. ಸಂಜೆ ಈ ಇಬ್ಬರು ಕಲಾವಿದರ ವಾದ್ಯಸಂಗೀತದ ಜುಗಲ್ ಬಂದಿ ನೆರೆದಿದ್ದ ಶ್ರೋತೃಗಳ ಸವಿನೆನಪಿನ ಕ್ಷಣಗಳಾಗಿ ಮಾರ್ಪಟ್ಟಿತು. 11ರಂದು ಸಂಜೆ ಹೆಸರಾಂತ ಕಲಾವಿದ ಶ್ರೀ ಗಣಪತಿಭಟ್ ಹಾಸಣಗಿ ಅವರ

ಹಿಂದೂಸ್ತಾನಿ ಸಂಗೀತ, 12ರಂದು ಎಸ್.ಬಿ.ಶಿವಲಿಂಗಪ್ಪ ಮತ್ತವರ ತಂಡದ ಸುಗಮ ಸಂಗೀತ ನಾದಪ್ರಿಯರಿಗೆ ವಿಶೇಷವಾದ ಅನುಭೂತಿಯನ್ನು ನೀಡಿತು. ವಿ.ಜಿ. ಸಿಂಧೂರ (ಜಮಖಂಡಿ), ಡಾ. ಜೆ.ಎಸ್. ಖಂಡೇರಾವ್ (ಕಲಬುರ್ಗಿ), ಪಿ.ಎಸ್. ಕಡೇಮನಿ (ವಿಜಯಪುರ), ಎಂ.ಬಿ. ಪಾಟೀಲ್ (ವಿಜಯಪುರ), ಎಸ್. ಕೃಷ್ಣಪ್ಪ (ಬೆಂಗಳೂರು), ದೇವರಾಜು, ಬಿ. (ಬೆಂಗಳೂರು ಗ್ರಾಮಾಂತರ), ಶ್ರೀಧರ್ ಮೂರ್ತಿ (ಬೆಂಗಳೂರು), ಪ.ಸ. ಕುಮಾರ್ (ಬೆಂಗಳೂರು), ಕೆ.ಎಸ್. ಅಪ್ಪಾಜಯ್ಯ (ಹುಣಸೂರು) ಹಾಗೂ ಕೃಷ್ಣ ಎಂ. ರಾಯಚೂರು ಅವರು ಪಾಲ್ಗೊಂಡು ಕಲಾಕೃತಿಗಳನ್ನು ರಚಿಸಿಕೊಟ್ಟರು.

ಜುಲೈ 14ರಂದು ನಡೆದ ಸಮಾರೋಪ ಸಮಾರಂಭದಲ್ಲಿ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಖಜಾಂಚಿ ದೇವಂಗಿ ಮನುದೇವ್, ಸಮ ಕಾರ್ಯದರ್ಶಿ ಕಡಿದಾಳ್ ಪ್ರಕಾಶ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಟಿ. ಜಿ.ನರಸಿಂಹಮೂರ್ತಿ, ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಕೆ.ಸುಧೀಂದ್ರ ಅವರು ಭಾಗವಹಿಸಿದ್ದರು.

## ಸಂಗಮ ಸಂಭ್ರಮ–2015 – ಪಿಲಿಕುಳ, ಮಂಗಳೂರು

ಮಂಗಳೂರು ಹೊರವಲಯದ ಪಿಲಿಕುಳದಲ್ಲಿರುವ ಡಾ. ಶಿವರಾಮಕಾರಂತ ನಿಸರ್ಗಧಾಮದ ಆವರಣದಲ್ಲಿ ಜುಲೈ 22ರಿಂದ 25ರವರೆಗೆ ಮೂರು ದಿನಗಳ ಕಾಲ **‘ಸಂಗಮ ಸಂಭ್ರಮ’** ಚಿತ್ರಕಲಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರವನ್ನು ಜಿಲ್ಲಾಧಿಕಾರಿ ಎ.ಬಿ.ಇಬ್ರಾಹಿಂ ಅವರು ಉದ್ಘಾಟಿಸಿದರು. ನಿಸರ್ಗಧಾಮದ ಕಾರ್ಯನಿರ್ವಾಹಕ ನಿರ್ದೇಶಕ ಎಸ್.ಎ.ಪ್ರಭಾಕರ ಶರ್ಮ, ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ರೊಯ್ ಕಾಸ್ಟಲಿನೊ, ತುಳು ಸಾಹಿತ್ಯ



**‘ಸಂಗಮ ಸಂಭ್ರಮ’ ಚಿತ್ರಕಲಾ ಶಿಬಿರಕ್ಕೆ**
ಮಂಗಳೂರು ಜಿಲ್ಲಾಧಿಕಾರಿ ಎ.ಬಿ.ಇಬ್ರಾಹಿಂ ಅವರಿಂದ **ವಿದ್ಯುಕ್ತ ಚಾಲನೆ**

ಅಕಾಡೆಮಿ ಅಧ್ಯಕ್ಷೆ ಎಂ. ಜಾನಕಿ ಬ್ರಹ್ಮಾವರ, ವಿವಿಧ ಅಕಾಡೆಮಿಗಳ ರಿಜಿಸ್ಟ್ರಾರ್‌ಗಳಾದ ಚಂದ್ರಹಾಸ್ ರೈ, ಉಮರಬ್ಬ, ದೇವದಾಸ್ ಪೈ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಮಂಗಳೂರಿನಲ್ಲಿ ರಾಷ್ಟ್ರಮಟ್ಟದ ಕಲಾಶಿಬಿರ ನಡೆಸುವ ಭರವಸೆ ನೀಡಿದರು.

ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ಎ.ಮೊಹಮ್ಮದ್ ಹನೀಫ್ ಸ್ವಾಗತಿಸಿದರು, ಕಲಾವಿದ ಗಣೇಶ್ ಸೋಮಯಾಜಿ ಕಾರ್ಯಕ್ರಮ ನಿರೂಪಿಸಿದರು. ಆರ್.ಕೆ.ರಾಘವೇಂದ್ರ ವಂದಿಸಿದರು.

ಶಿಬಿರದಲ್ಲಿ ರಮೇಶ್ ರಾವ್ (ಉಡುಪಿ), ಎನ್.ಎಸ್.ಪತ್ತರ್, ಪುರುಷೋತ್ತಮ ಅಡ್ವೆ (ಉಡುಪಿ), ಜೀವನ ಎ.ಸಾಲ್ಯಾನ್, ಅನಿಲ್ ದೇವಾಡಿಗ ಸುರತ್ಕಲ್, ವಿಶ್ವಾಸ್ ಎಂ. (ಕಾಸರಗೋಡು), ಸ್ವಪ್ನಾ ನೊರೊನ್ಹಾ, ಸಂತೋಷ್ ಅಂದ್ರಾದೆ ಕಂದನ್ ಜಿ. (ಮಂಗಳೂರು), ಹರೀಶ್ ಕೊಡಿಯಾಲ್ ಬೈಲು, ರಾಜೇಂದ್ರ ಕೇದಿಗೆ, ವಿಲ್ಸನ್ ಜೆ.ಪಿ ಡಿಸೋಜ, ಪಿ.ಎನ್.ಆಚಾರ್ಯ, ರಮೇಶ್, ಎಂ.ಆರ್.ರವಿ, ಗಣೇಶ್ ಸೋಮಯಾಜಿ ಅವರು ಪಾಲ್ಗೊಂಡು ತಲಾ ಎರಡೆರಡು ಕಲಾಕೃತಿಗಳನ್ನು ರಚಿಸಿಕೊಡುವುದರೊಂದಿಗೆ ಶಿಬಿರವನ್ನು ಯಶಸ್ವಿಗೊಳಿಸಿದರು.

## ತಿಂಗಳ ಚಿತ್ರ...

ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರತಿ ತಿಂಗಳು ಯುವ ಕಲಾವಿದರ ಕೃತಿಗಳ ಪ್ರದರ್ಶನಕ್ಕೆಂದೇ ನಡೆಸುವ **'ತಿಂಗಳ ಚಿತ್ರ'** ಕಾರ್ಯಕ್ರಮ ಆಗಸ್ಟ್ 31ರಿಂದ ಸೆಪ್ಟೆಂಬರ್ 4ರವರೆಗೆ ಜರುಗಿತು.

ಬೆಂಗಳೂರಿನ ಕನ್ನಡಭವನದ ಎರಡನೇ ಮಹಡಿಯಲ್ಲಿರುವ



**'ತಿಂಗಳ ಚಿತ್ರ' ಕಲಾಪ್ರದರ್ಶನ ಉದ್ಘಾಟಿಸುತ್ತಿರುವ ಮಾಜಿ ಅಧ್ಯಕ್ಷರಾದ ಡಾ. ಸಿ. ಚಂದ್ರಶೇಖರ್**



**ಯುವಕಲಾವಿದರ ಕಲಾಕೃತಿಗಳ ವೀಕ್ಷಣೆಯಲ್ಲಿ ಅಕಾಡೆಮಿ ಹಾಲಿ–ಮಾಜಿ ಅಧ್ಯಕ್ಷರು**

ವರ್ಣಗ್ಯಾಲರಿಯಲ್ಲಿ ಐದು ದಿನಗಳ ಕಾಲ ಬೆಳಗ್ಗೆ 11ರಿಂದ ಸಂಜೆ 6ರವರೆಗೆ ವೀಕ್ಷಣೆಗೆ ಲಭ್ಯವಿದ್ದ ಈ ಪ್ರದರ್ಶನವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಡಾ. ಸಿ. ಚಂದ್ರಶೇಖರ್ ಅವರು ಉದ್ಘಾಟಿಸಿ ಯುವಕಲಾವಿದರಿಗೆ ಹಿತವಚನ ಹೇಳಿದರು. ಅಕಾಡೆಮಿಯ ಅಧ್ಯಕ್ಷರಾದ ಡಾ.ಎಂ.ಎಸ್.ಮೂರ್ತಿ ಅವರು ಅಧ್ಯಕ್ಷತೆ ವಹಿಸಿ ಯುವಕಲಾವಿದರು ಸಾಗಬೇಕಿರುವ ದಾರಿಯ ಕುರಿತು ವಿವರ ನೀಡಿದರು.

ಯುವಕಲಾವಿದರಾದ ರಾಜೇಂದ್ರ ಕೇದಿಗೆ, ಸಂತೋಷ್ ಅಂದ್ರಾದೆ, ಜೀವನ್ ಸಾಲ್ಯಾನ್ ಮತ್ತು ಹರೀಶ್ ಕೊಡಿಯಾಲ್ ಬೈಲ್ ಅವರ ಕಲಾಕೃತಿಗಳು ಈ 'ತಿಂಗಳ ಚಿತ್ರ' ದಲ್ಲಿ ಪ್ರದರ್ಶನ ಕಂಡು ಕಲಾಸಕ್ತರು ಮತ್ತು ಕಲಾಸಮುದಾಯದ ಗಮನ ಸೆಳೆಯಿತು.

## ಪ್ರೀತಿಪದಗಳ ಪಯಣ...

ಚಿಂತನ ರಂಗ ಅಧ್ಯಯನ ಕೇಂದ್ರ, ಉತ್ತರ ಕನ್ನಡ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಹಯೋಗದಲ್ಲಿ ಅಸ್ಪೃಶ್ಯತೆ ವಿರೋಧಿ ಜಾಗೃತಿ ಕಾರ್ಯಕ್ರಮದ ಭಾಗವಾಗಿ **'ಪ್ರೀತಿ ಪದಗಳ ಪಯಣ'** ಸ್ಪರ್ಶ ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ ದಾಂಡೇಲಿಯಲ್ಲಿ ಸೆಪ್ಟೆಂಬರ್ 13ರಿಂದ 15ರವರೆಗೆ ಜರುಗಿತು.



**'ಸ್ಪರ್ಶ' ಚಿತ್ರಕಲಾ ಶಿಬಿರದ ಉದ್ಘಾಟನೆಗೆ ಸಾಕ್ಷಿಯಾದ ಗಣ್ಯರ ಸಮೂಹ**



**ಕಲಾಕೃತಿಗಳ ವೀಕ್ಷಣೆಯಲ್ಲಿ ಗಣ್ಯರು**

ಉತ್ತರ ಕನ್ನಡ ಜಿಲ್ಲೆಯ ಸಮಾಜ ಕಲ್ಯಾಣಾಧಿಕಾರಿಗಳಾದ ಎಂ.ಎಸ್.ಅಲ್ಲಾಬಕ್ಷ ಅವರು ಶಿಬಿರಕ್ಕೆ ಚಾಲನೆ ನೀಡಿದರು. ಉತ್ತರ ಕನ್ನಡ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಮದ್ ಅಶ್ರಫ್ ಅರೀಸ್, ಚಿಂತನ ರಂಗ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಡಾ. ಶ್ರೀಪಾದಭಟ್, ಕಾರ್ಯದರ್ಶಿ ಡಾ. ವಿಠಲ ಭಂಡಾರಿ ಅವರು ಉದ್ಘಾಟನಾ ಸಮಾರಂಭಕ್ಕೆ ಸಾಕ್ಷಿಯಾದರು. ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ. ಎಸ್.ಮೂರ್ತಿ ಅವರು ಉಪಸ್ಥಿತರಿದ್ದರು.

ಶಿಬಿರದಲ್ಲಿ ರಾಜ್ಯ ಮಟ್ಟದ ಕಲಾವಿದರಾದ ಬೆಂಗಳೂರಿನ ವರ್ಣಸಿಂಧು, ಶಿರಸಿಯ ಪ್ರಕಾಶ್.ಜಿ.ನಾಯಕ್, ರಾಯಭಾಗದ ಸಂಜೀವಕುಮಾರ್, ಯಾದಗಿರಿಯ ನರಸಿಂಹಲು ಬ್ಯಾಗೇರ್, ಗದಗದ ಬೆನಕಣ್ಣನವರ್, ಮೈಸೂರಿನ ಸೂರ್ಯಕಾಂತ ನಂದೂರ್, ಹಾವೇರಿಯ ಕರಿಯಪ್ಪ ಹಂಚಿನಮನಿ, ದಾವಣಗೆರೆಯ ರವಿನಾಥ ಪಟ್ಟಣಶೆಟ್ಟಿ, ಬೆಳಗಾವಿಯ ಅರುಣ ಪಿ.ಕೆ. ಸತೀಶ್ ಯಲ್ಲಾಪುರ ಮತ್ತಿತರ ಕಲಾವಿದರು ಭಾಗವಹಿಸಿ ತಲಾ ಎರಡು ಕಲಾಕೃತಿಗಳನ್ನು ರಚಿಸಿಕೊಟ್ಟರು.

ಶಿಬಿರದ ಜೊತೆಜೊತೆಗೆ ಚಿಂತನಗೋಷ್ಠಿ ಹಾಗೂ ಗಾನಸ್ಪಂದನ ಕಾರ್ಯಕ್ರಮಗಳೂ ನಡೆದದ್ದು ವಿಶೇಷವಾಗಿತ್ತು. ಚಿಂತನಾಗೋಷ್ಠಿಯಲ್ಲಿ ಪತ್ರಕರ್ತ ಆರ್.ಜಿ.ಹಳ್ಳಿ ನಾಗರಾಜ ಅವರು ಉಪನ್ಯಾಸ ನೀಡಿದರೆ ಗಾನಸ್ಪಂದನದಲ್ಲಿ ಸ್ವಾಮಿ ಗಾಮನಹಳ್ಳಿ, ವಿಶ್ವನಾಥ ಹಿರೇಮಠ, ಲಿಂಗರಾಜ ಅವರು ಮನುಕುಲದ ಹಾಡುಗಳನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಅರ್ಥಪೂರ್ಣತೆಯನ್ನು ತಂದುಕೊಟ್ಟರು.

■

**ಕಲಾವಿದರ ಗಮನಕ್ಕೆ**

**‘ವರ್ಣ ಗ್ಯಾಲರಿ’**

**‘ವರ್ಣ ಗ್ಯಾಲರಿ’ ಕಲಾವಿದರಿಗಾಗಿ ತೆರೆದಿದೆ. ‘ವರ್ಣ ಗ್ಯಾಲರಿ’ ಹವಾನಿಯಂತ್ರಿತ, ಬೆಳಕು ವ್ಯವಸ್ಥೆಯಿರುವ ಸುಸಜ್ಜಿತವಾದ ಗ್ಯಾಲರಿ. ಕೇವಲ 500 ರೂಪಾಯಿಗಳ ಬಾಡಿಗೆ ದಿನವೊಂದಕ್ಕೆ.**

# ಪಡಸಾಲೆ ಆರ್ಟ್ ಗ್ಯಾಲರಿಯ ನಿಬಂಧನೆಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಸ್ಥಾನವಾಗಿರುವ ಬೆಂಗಳೂರಿನ ಕನ್ನಡಭವನಕ್ಕೆ ಹೊಂದಿಕೊಂಡಂತಿರುವ ರವೀಂದ್ರ ಕಲಾಕ್ಷೇತ್ರದ ಬಲಬದಿಯಲ್ಲಿ ತಲೆಎತ್ತಿರುವ ಪಡಸಾಲೆ ಆರ್ಟ್ ಗ್ಯಾಲರಿ ಚಿತ್ರಕಲಾವಿದರ ಕಲಾಕೃತಿಗಳ ಬಯಲು ಪ್ರದರ್ಶನಕ್ಕೆಂದೇ ರೂಪಿಸಲಾಗಿರುವ ಕಲಾಗ್ಯಾಲರಿಯಾಗಿದೆ. ಈ ಗ್ಯಾಲರಿಯಲ್ಲಿ ಕಲಾವಿದರು ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಬಹುದಾಗಿದ್ದು ಗ್ಯಾಲರಿಯ ನಿಬಂಧನೆಗಳಿಗೆ ಒಳಪಡುವುದು ಕಡ್ಡಾಯವಾಗಿರುತ್ತದೆ. ಆ ನಿಬಂಧನೆಗಳ ಸ್ವರೂಪವಿದು.

1. ಪಡಸಾಲೆ ಆರ್ಟ್ ಗ್ಯಾಲರಿಯಲ್ಲಿ ಕರ್ನಾಟಕ ರಾಜ್ಯದ ಚಿತ್ರಕಲಾವಿದರಿಗೆ ಆದ್ಯತೆ
2. ಚಿತ್ರಕಲಾವಿದರಿಗಾಗಿ ಮಾತ್ರ ಪಡಸಾಲೆ ಆರ್ಟ್ ಗ್ಯಾಲರಿಯನ್ನು ಉಪಯೋಗಿಸುವುದು.
3. ಪಡಸಾಲೆ ಆರ್ಟ್ ಗ್ಯಾಲರಿಯು ದಿನವೊಂದಕ್ಕೆ ಬಾಡಿಗೆ ರೂ. 100/ಗಳು ಹಾಗೂ 5 (ಐದು) ದಿನದ ಬಾಡಿಗೆ ಹಣ ಮತ್ತು ಭದ್ರತಾ ಠೇವಣಿ 500 ರೂಪಾಯಿಗಳು ಸೇರಿದಂತೆ ಒಟ್ಟು 1000 ರೂ.ಗಳನ್ನು ಪಾವತಿಸಬೇಕು.
4. ಭದ್ರತಾ ಠೇವಣಿ (ರೂ. 500/-) ಮೊತ್ತವನ್ನು ಪ್ರದರ್ಶನ ಮುಗಿದ ನಂತರ ವಾಪಸ್ ನೀಡಲಾಗುವುದು.
5. ಕಲಾವಿದರು ಕಲಾಪ್ರದರ್ಶನಕ್ಕೆ ಕನಿಷ್ಠ 5 ದಿನಗಳಿಂದ ಗರಿಷ್ಠ 10 ದಿನಗಳವರೆಗೆ ಗ್ಯಾಲರಿಯನ್ನು ಪಡೆಯಬಹುದು.
6. ಕಲಾವಿದರು ಮೊದಲು ಅಕಾಡೆಮಿಗೆ ಅರ್ಜಿ ಸಲ್ಲಿಸಬೇಕು. ಅಕಾಡೆಮಿಯು ಪರಿಶೀಲಿಸಿದ ನಂತರ ಕಲಾವಿದರಿಗೆ "ಪಡಸಾಲೆ ಆರ್ಟ್ ಗ್ಯಾಲರಿ" ನೀಡಲಾಗುವುದು. 'ಪಡಸಾಲೆ ಆರ್ಟ್ ಗ್ಯಾಲರಿ'ಯನ್ನು ಲಲಿತ ಕಲಾ ಅಕಾಡೆಮಿಯ ಅನುಮೋದನೆ ಇಲ್ಲದೆ ಬಳಸುವಂತಿಲ್ಲ. ಸಂಪೂರ್ಣ 'ದೃಶ್ಯ ಕಲಾವಿದರ ಕಲಾಕೃತಿಗಳ ಪ್ರದರ್ಶನ'ಕ್ಕೆ ಮಾತ್ರ ಸೀಮಿತವಾದ ವೇದಿಕೆಯಾದ್ದರಿಂದ ಇತರೆ ಯಾವುದೇ ಕಾರ್ಯಕ್ರಮಗಳು ಅಕಾಡೆಮಿಯ ನಿರ್ದೇಶನದಲ್ಲಿ ನಡೆಯುವುದು ಸೂಕ್ತ.
7. ಪ್ರದರ್ಶನಕ್ಕೆ ಆಯ್ಕೆಯಾದ ಕಲಾವಿದರು ಪ್ರದರ್ಶನದ ವ್ಯವಸ್ಥೆ ಮತ್ತು ಕಲಾಕೃತಿಯ ಎಲ್ಲ ರೀತಿಯ ಜವಾಬ್ದಾರಿ ಕಲಾವಿದರೇ ನಿರ್ವಹಿಸಬೇಕಾಗುತ್ತದೆ.
8. ಕಲಾವಿದರು ಅಕಾಡೆಮಿಯ ಶಿಫಾರಸಿನ ಪತ್ರದೊಂದಿಗೆ ಗ್ಯಾಲರಿ ಪ್ರಕ್ರಿಯೆಯನ್ನು ವ್ಯವಸ್ಥಾಪಕರು, ರವೀಂದ್ರಕಲಾಕ್ಷೇತ್ರ, ಬೆಂಗಳೂರು ಇವರಿಗೆ ಹಣ ಸಂದಾಯ ಮಾಡಿ, ಕಾಯ್ದಿರಿಸಬಹುದು.
9. 'ದೃಶ್ಯಕಲೆ'ಯೊಂದಿಗೆ ಇತರೆ ಸಾಂಸ್ಕೃತಿಕ ಕಲಾಪ್ರಕಾರಗಳು ಅಂದರೆ ಸಾಹಿತ್ಯ, ಸಂಗೀತ, ಕವಿಗೋಷ್ಠಿಯಂತಹ ಕಾರ್ಯಕ್ರಮಗಳು ಕೂಡ 'ಪಡಸಾಲೆ ಕಲಾ ಪ್ರದರ್ಶನ' ನಡೆಯುವ ಸಂದರ್ಭದಲ್ಲೂ ಒಂದು ಅಥವಾ 2 ತಾಸಿನ ಸರಳ ಕಾರ್ಯಕ್ರಮಗಳು ನಡೆಸಬಹುದಾಗಿದೆ. ಕರ್ನಾಟಕ ಲಲಿತ ಕಲಾ ಅಕಾಡೆಮಿಯು ಸಹಕಾರದೊಂದಿಗೆ ಈ ಸೌಜನ್ಯದ ಸಾಂಸ್ಕೃತಿಕ ಸಂಬಂಧ ಬೆಳೆಸುವ ಮೂಲಕ ಸಾಂಸ್ಕೃತಿಕ ಪ್ರೇಕ್ಷಕರನ್ನು ಹೆಚ್ಚಿಸುವುದಾಗಿದೆ.



ಪಡಸಾಲೆ ಆರ್ಟ್ ಗ್ಯಾಲರಿಯ ವಿಹಂಗಮ ನೋಟ


ಉದಯವಾಣಿ 31-7-2016
ಸಂಗಮ-ಸಂಭ್ರಮದಲ್ಲಿ ಕಲಾಸಂಭ್ರಮ
ಪ್ರೀತಿ ಪದಗಳ ಪಯಣ ಕಾರ್ಯಕ್ರಮ ಆರಂಭ
ಕಲಾ ಸಂವಾದದಲ್ಲಿ ಕಲಾವಿದ ಯು. ಭಾಸ್ಕರ ರಾವ್ ಕಿವಿ ಮಾತು
ಕಲಾಕೃತಿಯ ತೀರ್ಪು ನೋಡುಗರಿಗೆ ಬಿಡಿ
ಸಾಹಿತ್ಯದಲ್ಲೂ ಕೊಳ್ಳುಬಾಕ ಸಂಸ್ಕೃತಿ ಹೆಚ್ಚಳ
ರಾಜ್ಯಮಟ್ಟದ ನಾಲ್ಕು ದಿನಗಳ ಚಿತ್ರಕಲಾ ಶಿಬಿರಕ್ಕೆ ಚಾಲನೆ
ಕುಂಚದಲ್ಲಿ ಅರಳಿದ ಪ್ರಕೃತಿ

# 'ಅಕಾಡೆಮಿ'ಯ ಮಾಧ್ಯಮ ಚಿತ್ರಗಳು



## ಬದುಕು-ಭಾವೈಕತೆಯ ಚಿತ್ರಣ

**(ಪೀಟರ್ ಲೂಯಿಸ್ ಅವರ ಕಲಾಕೃತಿಯ ವಿಶ್ಲೇಷಣೆ)**

**ಕ**ರಾವಳಿ ಕರ್ನಾಟಕದ ಪ್ರಸಿದ್ಧ ಚಿತ್ರಕಲಾವಿದರಾಗಿರುವ ಉಡುಪಿ ಬ್ರಹ್ಮಾವರದ ಹಿರಿಯ ಕಲಾವಿದ ಪೀಟರ್ ಎ.ಲೂಯಿಸ್ ಅವರು ಸಮಕಾಲೀನ ನವ್ಯಪಂಥದ ಕಲಾಕೃತಿ ರಚನೆಯಲ್ಲಿ ಹೆಸರು ಮಾಡಿದವರು. ಸಾಕಷ್ಟು ಚಿತ್ರಕಲಾಕೃತಿಗಳನ್ನು ರಚಿಸಿರುವ ಅವರು ಭಾರತದಲ್ಲಿ ಮಾತ್ರವಲ್ಲದೆ ದುಬಾಯಿ, ಶಾರ್ಜಾ ಮುಂತಾದ ವಿದೇಶಗಳಲ್ಲಿಯೂ ಕಲಾಪ್ರದರ್ಶನ ನಡೆಸಿದವರು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಕಲಾ ಪ್ರಗತಿಗೆ ದುಡಿದವರು. ಕಲಾಸಾಧನೆಗಾಗಿ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದವರು. ದುಡಿಯುವ ವರ್ಗದ ಜೀವನಚಿತ್ರಗಳನ್ನು, ಜನಪದ ವಿಷಯಗಳನ್ನು ಹಾಗೂ ಕ್ರಿಶ್ಚಿಯನ್ ಧರ್ಮಸಂಬಂಧಿ ಕಲಾಕೃತಿಗಳನ್ನು ರಚಿಸುವಲ್ಲಿ ಸಿದ್ಧಹಸ್ತರು. ಬ್ರಹ್ಮಾವರದಲ್ಲಿರುವ ಅವರ ಚಿತ್ರಾಲಯ ಆರ್ಟ್ ಗ್ಯಾಲರಿಗೆ ಭೇಟಿ ನೀಡಿ ಗಮನಿಸಿದರೆ ಅಲ್ಲಿ ಅವರು ರಚಿಸಿರುವ ವಿವಿಧ ಕಲಾಕೃತಿಗಳು ಹಾಗೂ ಸಾಕಷ್ಟು ಕ್ರಿಶ್ಚಿಯನ್ ಧರ್ಮಸಂಬಂಧಿ ಕಲಾಕೃತಿಗಳನ್ನು ಕಾಣಬಹುದು. ಬಹಳ ಸರಳವಾಗಿ ಅಷ್ಟೇ ಗಂಭೀರವಾಗಿ ಚಿತ್ರಿಸಿರುವ ಕಲಾಕೃತಿಗಳು ಅಲ್ಲಿವೆ. ಕ್ರಿಸ್ತಚರಿತೆಯ ಚಿತ್ರಗಳು ವಿದೇಶದ ಪ್ರಾಚೀನ ಚರ್ಚುಗಳಲ್ಲಿ ಸಾಕಷ್ಟಿವೆಯಾದರೂ ಭಾರತದಲ್ಲಿ ವಿರಳ. ಸಮಕಾಲೀನವಾಗಿ ಇಂತಹ ಕಲಾಕೃತಿಗಳನ್ನು ರಚಿಸುವ ಕಲಾವಿದರು ವಿದೇಶಗಳಲ್ಲಿ ಇರಬಹುದಾದರೂ ಭಾರತದಲ್ಲಿ ಬಹು ವಿರಳ. ಅಂತಹವರಲ್ಲಿ ಒಬ್ಬರು ಪೀಟರ್ ಎ.ಲೂಯಿಸ್ ಅವರು.

ಅಕ್ರಿಲಿಕ್ ಮಾಧ್ಯಮದಲ್ಲಿ ಕಲಾಕೃತಿ ರಚಿಸುವುದರಲ್ಲಿ ಪೀಟರ್ ಲೂಯಿಸ್ ಸಿದ್ಧಹಸ್ತರು. ಅವರ ಕಲಾಕೃತಿಗಳ ಗಾತ್ರವೂ ದೊಡ್ಡದಾಗಿರುತ್ತದೆ. ಜಲವರ್ಣ ಚಿತ್ರಗಳಂತೆ ಕ್ಯಾನ್ವಾಸಿನ ಬಿಳಿ ಭಾಗವನ್ನು ಬೇಕಾದೆಡೆ ಹಾಗೆಯೇ ಉಳಿಸಿಕೊಂಡು ಕಲಾಕೃತಿಯನ್ನು ಅಂದಗೊಳಿಸುತ್ತಾರೆ. ಬಣ್ಣಗಳನ್ನು ಪದರ ಪದರವಾಗಿ ಇಲ್ಲವೇ ಮೈವಳಿಕೆಯುಕ್ತವಾಗಿ ಪಸರಿಸಿ ಕಲಾಕೃತಿಗಳನ್ನು ರಚಿಸುತ್ತಾರೆ.

ಪೀಟರ್ ಲೂಯಿಸ್ ಅವರ ಇತ್ತೀಚಿನ ಆಕ್ರಿಲಿಕ್ ಕಲಾಕೃತಿಯೊಂದರಲ್ಲಿ ಕರಾವಳಿಯ ಮೀನುಗಾರರ ಕಷ್ಟಕರ ಬದುಕು ಮತ್ತು ರಾಷ್ಟ್ರೀಯ ಭಾವೈಕ್ಯತೆಯ ಸಮಗ್ರ ನೋಟವಿದೆ. ಪೀಟರ್ ಲೂಯಿಸ್ ಅವರು ತಮ್ಮ ಮನೆಗೆ ಹತ್ತಿರದ ಬೆಂಗ್ರೆ ಕಡಲಕಿನಾರೆಯಲ್ಲಿ ನಿಂತು ಮೀನುಗಾರರ ಬದುಕನ್ನು ಸಮಗ್ರವಾಗಿ ಅಧ್ಯಯನ ಮಾಡಿ ಈ ಕಲಾಕೃತಿ ರಚಿಸಿದ್ದಾರೆ. ಬೆಂಗ್ರೆಯಲ್ಲಿ ಮೀನುಗಾರರು ಅಳಿವೆ ಬಾಗಿಲಿನ ಒಳಗೆ ಬಂದು ಫಿಶ್ಶಿಂಗ್ ಬೋಟ್‌ಗಳನ್ನು ಪಾರ್ಕ್ ಮಾಡ್ತಾರೆ. ಅಂತಹ ಕೆಲವು ಬೋಟ್‌ಗಳು ಚಿತ್ರದಲ್ಲಿ ಕಾಣಸಿಗುತ್ತದೆ. ಬೆಸ್ತರಿಗೆ ಅಲ್ಲಿ ಬೋಟನ್ನು ಲಂಗರು ಹಾಕಲಿಕ್ಕೆ ಜಾಗ ಇಲ್ಲದಿದ್ದರೂ ತಾವೇ ಅದನ್ನು ನಿರ್ಮಿಸಿಕೊಂಡು ಬೋಟ್‌ಗಳನ್ನು ಪಾರ್ಕ್ ಮಾಡ್ತಾರೆ. ಎದುರಿಗೆ ವಿಶಾಲವಾದ ನೀಲಸಾಗರವಿದೆ. ಮೇಲ್ಗಡೆ ಕಾರ್ಮೋಡ ತುಂಬಿದ ಆಕಾಶ, ಈಚೆಗೆ ಮರಳರಾಶಿಯ ದಿಂಡು, ದಿಂಡಿನ ಈಚೆಗೆ ಒಳಸಮುದ್ರದ ನದಿಯಿದೆ. ಸಮುದ್ರದಲ್ಲಿ ಅಲೆಗಳು ರಭಸದಿಂದ ಭೋರ್ಗರೆದು ಬರುತ್ತಿವೆ. ದಡಕ್ಕೆ ಅಪ್ಪಳಿಸುತ್ತಿವೆ. ಈ ರಭಸದ ಮಧ್ಯೆಯೂ ಬೆಸ್ತರು ಮೀನು ಹಿಡಿಯಲು ಬೋಟ್‌ನಲ್ಲಿ ಹೊರಟಿದ್ದಾರೆ. ಬೋಟ್‌ಗಳು ಅಲ್ಲೋಲ ಕಲ್ಲೋಲವಾಗಿ ಚಲಿಸುತ್ತಿವೆ. ಆದರೆ ಮೀನುಗಾರರು ಧೈರ್ಯ ಸಾಹಸದೊಂದಿಗೆ ಮುನ್ನುಗ್ಗುತ್ತಿದ್ದಾರೆ. ಜೀವನ ನಿರ್ವಹಣೆಯ ಗುರಿಯ ಮುಂದೆ ಇದ್ಯಾವುದೂ ಅವರಿಗೆ ಲೆಕ್ಕಕ್ಕಿಲ್ಲ. ಆದರೆ ಅವರಲ್ಲಿ ರಾಷ್ಟ್ರೀಯ ಭಾವೈಕ್ಯತೆಯಿದೆ. ನಮ್ಮ ದೇಶದ ಬಗ್ಗೆ ಅಭಿಮಾನವಿದೆ. ಮರಳದಿನ್ನೆಯ ಮೇಲೆ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿದ್ದಾರೆ. ಪ್ರತಿಯೊಬ್ಬರ ಬೋಟ್‌ನ ತುತ್ತ ತುದಿಯಲ್ಲಿಯೂ ನಮ್ಮ ಬಾವುಟ ಹಾರುತ್ತಿದೆ. ನಾವೆಲ್ಲಾ ಒಂದು ಎಂಬ ಸಂದೇಶವನ್ನು ಸಾರುತ್ತಿದೆ.

ಪೀಟರ್ ಲೂಯಿಸ್ ಈ ಕಲಾಕೃತಿಯನ್ನು ಎತ್ತರದಲ್ಲಿ ಪಕ್ಷಿನೋಟ ದಲ್ಲಿ ಕಾಣುವಂತೆ ಚಿತ್ರಿಸಿರುತ್ತಾರೆ. ಬಣ್ಣಗಳನ್ನು ಸಾದೃಶ್ಯವಾಗಿ ಕುಂಚದ ರಭಸದ ಹೊಡೆತದೊಂದಿಗೆ ಪಸರಿಸಿದ್ದಾರೆ. ಇದು ನೀರಿನ ಸೆಳವು, ಗಾಳಿಯ ಸುಳಿವು ಮತ್ತು ಬೋಟ್‌ಗಳ ಅಲ್ಲಾಡುವಿಕೆಯನ್ನು ಎತ್ತಿ ತೋರಿಸುತ್ತದೆ. ಬಣ್ಣಗಳ ಬಳಕೆಯಲ್ಲಿ ಪಾರದರ್ಶಕ ತಂತ್ರವನ್ನು ಬಳಸಿದ್ದಾರೆ. ಎತ್ತರದ ಭಾಗಗಳನ್ನು ತೋರಿಸಲು ಕ್ಯಾನ್‌ವಾಸ್‌ನ ಬಿಳಿಭಾಗವನ್ನೇ ಬಿಟ್ಟು ಪರಿಣಾಮಕಾರಿಯಾಗಿರಿಸಿದ್ದಾರೆ. ಬಣ್ಣಗಳಲ್ಲಿ ಗಾಢ ಪರಿಣಾಮವನ್ನು ತುಂಬಿಸಿದ್ದಾರೆ. ಒಟ್ಟಿನಲ್ಲಿ ಈ ಕಲಾಕೃತಿ ಸಮುದ್ರ ತಟದ ಒಟ್ಟಾರೆ ರುದ್ರರಮಣೀಯತೆಯನ್ನು ಹಾಗೂ ದುಡಿಯುವ ವರ್ಗದ ಕಷ್ಟಕರ ಜೀವನಚಿತ್ರವನ್ನು ನಮ್ಮ ಕಣ್ಣೆದುರು ತೆರೆದಿಡುತ್ತದೆ.

**ಉಪಾಧ್ಯಾಯ ಮೂಡುಬೆಳ್ಳೆ**



## ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕೃತರು

(1966ರಿಂದ 2014ರವರೆಗೆ)

- 1966
  1. ಶ್ರೀ ಎಂ. ವೀರಪ್ಪ
  2. ಶ್ರೀ ಎಂ.ವಿ. ಮಿಣಜಗಿ
  3. ಶ್ರೀ ಎಸ್.ಎನ್. ಆಳಂದಕರ್
  4. ಶ್ರೀ ಎಸ್.ಎನ್. ಸ್ಥಪತಿ

- 1967
  5. ಶ್ರೀ ಜಿ.ವೆಂಕಟಾಚಲಂ
  6. ಶ್ರೀ ಎಂ.ಎ. ಚೆಟ್ಟಿ
  7. ಶ್ರೀ ಬಿ. ಬಸವಯ್ಯ
  8. ಶ್ರೀ ಎಸ್.ಎನ್. ಸ್ವಾಮಿ

- 1968
  9. ಶ್ರೀ ಎಫ್.ಬಿ.ಯಲಪಟ್ಟಿ
  10. ಶ್ರೀ ಡಿ.ವಿ. ಹಾಲಭಾವಿ
  11. ಶ್ರೀ ಎ.ಸಿ. ಅಚಾರ್ಯ

- 1969
  12. ಶ್ರೀ ಅ.ನ. ಸುಬ್ಬರಾಯರು
  13. ಶ್ರೀ ಎಸ್. ನಂಜುಂಡಸ್ವಾಮಿ
  14. ಶ್ರೀ ಜಿ.ಎಸ್. ದಂಡಾಮತಿಮಠ
  15. ಶ್ರೀ ರಂಜಾಳ ಗೋಪಾಲಕೃಷ್ಣ ಶೆಣೈ

- 1970
  16. ಶ್ರೀ ಎಸ್.ಜಿ. ಟಂಕಸಾಲೆ
  17. ಶ್ರೀ ಟಿ.ಪಿ. ಅಕ್ಕಿ
  18. ಶ್ರೀ ಎಸ್.ಆರ್. ಸ್ವಾಮಿ

- 1971
  19. ಶ್ರೀ ಎಂ.ಜೆ. ಶುದ್ಧೋದನ
  20. ಶ್ರೀ ಕೆ.ಎ. ಚೆಟ್ಟಿ
  21. ಶ್ರೀ ಎಸ್.ಆರ್. ಐಯ್ಯಂಗಾರ್

- 1972 22. ಶ್ರೀ ವೈ. ನಾಗರಾಜು
  23. ಶ್ರೀ ರುಮಾಲೆ ಚೆನ್ನಬಸವಯ್ಯ
  24. ಶ್ರೀ ಕೆ.ಬಿ. ಕುಲಕರ್ಣಿ
  25. ಶ್ರೀ ರಾಘವೇಂದ್ರ ಬಿ. ಚವಣೆ

- 1973 26. ಶ್ರೀ ಹೆಚ್.ಎಸ್. ಇನಾಮತಿ
  27. ಶ್ರೀ ಆರ್.ಎಸ್. ನಾಯುಡು
  28. ಶ್ರೀ ವೈ. ಸುಬ್ರಹ್ಮಣ್ಯ ರಾಜು
  29. ಶ್ರೀ ನಾರಾಯಣ ಕುಲಕರ್ಣಿ

- 1980 30. ಶ್ರೀ ಎನ್. ಹನುಮಯ್ಯ
  31. ಶ್ರೀ ಎನ್.ಎಸ್. ಸುಬ್ಬುಕೃಷ್ಣ
  32. ಶ್ರೀ ಎಂ.ಟಿ.ವಿ. ಆಚಾರ್ಯ
  33. ಶ್ರೀ ಎಂ.ಎಸ್. ನಂಜುಂಡರಾವ್
  34. ಶ್ರೀ ವಿ.ಸಿ. ಮಾಲಗತ್ತಿ
  35. ಶ್ರೀ ಎನ್. ನರಸಿಂಹಾಚಾರ್
  36. ಶ್ರೀ ಬಿ.ಜಿ. ಮಹಮ್ಮದ್

- 1981 37. ಶ್ರೀ ಬಿ.ಪಿ. ಬಾಯಿರಿ
  38. ಶ್ರೀ ಪಿ.ಆರ್. ತಿಪ್ಪೇಸ್ವಾಮಿ
  39. ಶ್ರೀ ಎಸ್.ಎಸ್. ಕುಕ್ಕೆ
  40. ಶ್ರೀ ಸಿ.ಎನ್. ಪಾಟೀಲ್
  41. ಶ್ರೀ ಆರ್.ಜಿ. ರಾಯ್‌ಕರ್

- 1982 42. ಶ್ರೀ ಎಂ. ಎಸ್. ಚಂದ್ರಶೇಖರ್
  43. ಶ್ರೀ ಎಂ.ಈ. ಗುರು
  44. ಶ್ರೀ ಎಫ್. ಎಂ. ಸೂಫಿ
  45. ಶ್ರೀ ಆರ್.ಎಂ. ಪಂಡಿತ್
  46. ಶ್ರೀ ಎಸ್. ಶೆಟ್ಟರ್

- 1983 47. ಶ್ರೀ ಎಂ. ಎಚ್. ರಾಮು
  48. ಶ್ರೀ ಎಸ್.ಬಿ. ಚಿನ್ನಣ್ಣವರ

- 1984 49. ಶ್ರೀ ಕೆ.ಕೆ. ಹೆಬ್ಬಾರ್
  50. ಶ್ರೀ ಧನಂಜಯ ಶಿಲ್ಪ
  51. ಶ್ರೀ ಸಾಗರದತ್ತ ಪಾಟೀಲ
  52. ಶ್ರೀ ಜಿ. ಬಸವಣ್ಣ ಶಿಲ್ಪ
  53. ಶ್ರೀ ಬಿ.ಎಚ್. ರಾಮಚಂದ್ರ

● 1985 54. ಶ್ರೀ ಎನ್.ಕೆ. ಮೃತ್ಯುಂಜಯಾಚಾರ್ಯ
55. ಶ್ರೀಮತಿ ಜೆ.ವಿ. ಸುಭಾಷಿಣಿದೇವಿ
56. ಶ್ರೀ ಕೃಷ್ಣಕ್ಷತ್ರಿ
57. ಶ್ರೀ ವಿ.ಟಿ. ಕಾಳೆ

● 1986 58. ಶ್ರೀ ಎಸ್. ಕಾಳಪ್ಪ
59. ಶ್ರೀ ಎಂ.ಬಿ. ಪಾಟೀಲ
60. ಶ್ರೀ ಬಿ.ವಿ.ಕೆ. ಶಾಸ್ತ್ರೀ
61. ಶ್ರೀ ನಾರಾಯಣಪ್ಪ ಚಿತ್ರಗಾರ
62. ಶ್ರೀ ಕಾಳಪ್ಪ ಮಾನಪ್ಪ ಕಮ್ಮಾರ

● 1987 63. ಶ್ರೀ ಎಸ್.ಎನ್. ಚಂದ್ರಶೇಖರ್
64. ಶ್ರೀ ಎಸ್.ಜಿ. ವಾಸುದೇವ್
65. ಶ್ರೀ ವಿ.ಕೆ. ಪಾಟೀಲ್

● 1988 66. ಶ್ರೀ ಎಸ್.ಎಸ್. ಮುನೋಳಿ
67. ಶ್ರೀ ಜಿ.ಡಿ. ಮಾಯಾಚಾರ್ಯ ಶಿಲ್ಪ
68. ಶ್ರೀ ಜೆ.ಎಸ್. ಖಂಡೇರಾವ್
69. ಶ್ರೀ ಆರ್.ಬಿ. ಕಂಬಾರ
70. ಶ್ರೀ ಶ್ರೀಕಾಂತ ಸಿ. ಶೆಟ್ಟಿ

● 1989 71. ಶ್ರೀ ಕೆ.ಎಸ್. ರಾವ್
72. ಶ್ರೀ ವೈ.ಎಚ್. ಸೂಗೂರು
73. ಶ್ರೀ ಪಂಚಾಕ್ಷರಯ್ಯ ಶಿವಮೂರ್ತಯ್ಯ ಹಿರೇಮಠ
74. ಶ್ರೀ ಯೂಸುಫ್ ಅರಕ್ಕಲ್
75. ಶ್ರೀ ಬಿ.ಎಸ್. ರಾಮಚಂದ್ರಪ್ಪ

● 1990 76. ಶ್ರೀ ಸಿ. ಪರಮೇಶ್ವರಾಚಾರ್
77. ಶ್ರೀ ಬಿ.ವಿ. ರಾಮಮೂರ್ತಿ
78. ಶ್ರೀ ಸೋಮಶೇಖರ ಎಂ. ಸಾಲಿ
79. ಶ್ರೀ ಪೀಟರ್ ಎ. ಲೂಯಿಸ್
80. ಶ್ರೀ ಜಿ.ಎಸ್. ಶೆಣೈ

● 1991 81. ಶ್ರೀ ವೆಂಕೋಬಪ್ಪ ಕೃಷ್ಣಪ್ಪ ಚಿತ್ರಗಾರ
82. ಶ್ರೀ ಎ.ಎಸ್. ಪಾಟೀಲ್
83. ಶ್ರೀ ಬಸವರಾಜ ಹಳಿಜೋಳ
84. ಶ್ರೀ ವಿ.ಬಿ. ಹಿರೇಗೌಡರ್
85. ಶ್ರೀ ನಾಗಮಂಗಲ ಪುಟ್ಟಾಚಾರ್ಯ
86. ಶ್ರೀನಿವಾಸಚಾಯ್ಯ

- 1992 87. ಶ್ರೀ ಬಿ.ಕೆ. ಹುಬ್ಬಿ
  88. ಶ್ರೀ ದೇವಲಕೊಂಡ ವಾದಿರಾಜ
  89. ಶ್ರೀ ನಾಗಲಿಂಗಾಚಾರ್ಯ ಶಂಕರಪ್ಪಾಚಾರ್ಯ ಶಿಲ್ಪ
  90. ಶ್ರೀ ಜಿ.ವೈ. ಹುಬ್ಳೀಕರ್
  91. ಶ್ರೀ ಕೆ.ವಿ. ಸೀತಾರಾಮನ್

- 1993 92. ಶ್ರೀ ಎಲ್.ಪಿ. ಅಂಚನ್
  93. ಶ್ರೀ ವಿಠ್ಠಲ್ ಆರ್. ಶೆಟ್ಟಿ
  94. ಶ್ರೀ ಎಂ. ರಾಮನರಸಯ್ಯ
  95. ಶ್ರೀಮತಿ ಕಮಲಾಕ್ಷಿ ಎಂ.ಜೆ.
  ಶ್ರೀ ಶಂಕರಗೌಡ ಬೆಟ್ಟದೂರು

- 1994 96. ಶ್ರೀ ಎಸ್.ಕೆ. ರಾಮಚಂದ್ರರಾವ್
  97. ಶ್ರೀ ಆರ್.ಕೆ. ಸೀತಾರಂ
  98. ಶ್ರೀ ವಿ.ಜಿ. ಅಂದಾನಿ
  99. ಶ್ರೀ ಜಯವಂತ ಸಂಗಪ್ಪ ಮುನ್ನೋಳಿ
  100. ಶ್ರೀ ಕೆ. ಶಾಮರಾಯ ಆಚಾರ್ಯ
  101. ಶ್ರೀ ಎಂ.ವೈ. ಘೋರ್ಪಡೆ
  102. ಶ್ರೀ ಸಿ. ರಾಜಗೋಪಾಲ

- 1995 103. ಡಾ. ಬಿ.ಕೆ. ಹಿರೇಮಠ
  104. ಶ್ರೀ ಮಹಾವೀರ ರಾಯಪ್ಪ ಬಾಳೀಕಾಯಿ
  105. ಶ್ರೀ ಟಿ.ಎನ್. ಪೆರುಮಾಳ್
  106. ಶ್ರೀ ಟಿ.ವಿರೂಪಾಕ್ಷಪ್ಪ
  107. ಶ್ರೀ ಎನ್.ಬಿ. ನೀಲಕಂಠಾಚಾರ್

- 1996 108. ಶ್ರೀ ಎಂ.ಬಿ. ಬಸವರಾಜು
  109. ಶ್ರೀ ಬಿ. ಕೊಂಡಾಚಾರ್ಯ
  110. ಶ್ರೀ ಯು. ಭಾಸ್ಕರರಾವ್
  111. ಡಾ. ದೊಡ್ಡೇರಿ ವೆಂಕಟಗಿರಿರಾವ್
  112. ಶ್ರೀ ಪಿ.ಎಸ್. ಪುಣಿಂಚಿತ್ತಾಯ

- 1997 113. ಶ್ರೀ ವಿಷ್ಣುದಾಸ್ ರಾಮದಾಸ್
  114. ಶ್ರೀ ಕಾಳಿದಾಸ್ ಪತ್ತಾರ್
  115. ಶ್ರೀ ಕೆ.ಎಸ್. ಶೇರಿಗಾರ್
  116. ಶ್ರೀಮತಿ ಎಸ್. ಧನಲಕ್ಷ್ಮೀ
  117. ಶ್ರೀ ಇ. ಹನುಮಂತರಾವ್

- 1998 118. ಶ್ರೀ ಎಂ.ಜಿ. ವಾಚೇದಮಠ
  119. ಶ್ರೀ ಶಂಕರ ಪಾಟೀಲ
  120. ಶ್ರೀ ಆರ್ಯ ಆಚಾರ್ಯ
  121. ಶ್ರೀ ಬಸವಂತರಾವ್ ಕಡೂನ್
  122. ಶ್ರೀ ಕೆ. ಚಂದ್ರನಾಥ ಆಚಾರ್ಯ
- 1999 123. ಶ್ರೀ ಬಸವರಾಜ ಆರ್. ಉಪ್ಪಿನ
  124. ಶ್ರೀ ಕೆ.ಲಕ್ಷ್ಮಣಭಟ್
  125. ಶ್ರೀ ಸಿ. ಚಂದ್ರಶೇಖರ
  126. ಶ್ರೀ ಎನ್.ಸಿ. ದೇಸಾಯಿ
  127. ಶ್ರೀ ಕೆ.ವಿ. ಸುಬ್ರಮಣ್ಯ
- 2000 128. ಶ್ರೀ ಮನೋಹರ ದೇ ಕಡ್ಲಿಕೊಪ್ಪ
  129. ಶ್ರೀ ಎಂ.ಬಿ. ಲೋಹಾರ
  130. ಶ್ರೀಮತಿ ಪುಷ್ಪಾದ್ರಾವಿಡ್
  131. ಶ್ರೀ ರಾಮದಾಸ ಆದ್ಯಂತಾಯ
  132. ಶ್ರೀ ಕೆ.ಬಿ. ಸೋಮಶೇಖರ
- 2001 133. ಶ್ರೀ ರಘೋತ್ತಮ ಪುಟ್ಟಿ
  134. ಶ್ರೀ ಹೆಚ್.ಎನ್. ಕುಲಕರ್ಣಿ
  135. ಶ್ರೀಮತಿ ಗಿರಿಜಾ ಯಾದವ್
  136. ಶ್ರೀ ಜಸುರಾವಲ್
  137. ಶ್ರೀ ಮಹದೇವ ಕವಿಶೆಟ್ಟಿ
  138. ಶ್ರೀ ದರ್ಬೆ ಕೃಷ್ಣಾನಂದ ಚೌಟ
- 2002 139. ಶ್ರೀ ಪಿ.ಎಸ್. ಹಿರೇಮಠ
  140. ಶ್ರೀ ಚಿ.ಸು. ಕೃಷ್ಣಸೆಟ್ಟಿ
  141. ಶ್ರೀ ಪಿ. ರಾಜಶೇಖರ
  142. ಶ್ರೀ ಪುರುಷೋತ್ತಮ ಕಾರಂತ
  143. ಶ್ರೀ ನಾರಾಯಣ ಭೋಸಾವಳೆ
  144. ಶ್ರೀ ಎಲ್. ರೇವಣಸಿದ್ದಯ್ಯ
- 2003 145. ಶ್ರೀ ಸಿ.ಬಿ. ಕಾಚಾಪುರ
  146. ಶ್ರೀ ಎಸ್.ಎಸ್. ಸಿಂಪಿ
  147. ಶ್ರೀ ಜಿ.ಎಸ್.ಎನ್. ಸಿಂಹ
  148. ಶ್ರೀಮತಿ ಲಲಿತಾ ಹೊಯ್ಸಳ
  149. ಶ್ರೀ ಕ.ರಾ. ಕೃಷ್ಣಸ್ವಾಮಿ
- 2004 150. ಡಾ. ಎಸ್.ಸಿ. ಪಾಟೀಲ
  151. ಶ್ರೀ ಎನ್. ಮರಿಶಾಮಾಚಾರ್
  152. ಶ್ರೀ ಕೆ.ಎಸ್. ಸರೋದೆ

- 2005 153. ಶ್ರೀ ದಯಾನಂದ ಅಚ್ಯುತ ಶೆಟ್ಟಿ
  154. ಶ್ರೀ ಪ.ಸ. ಕುಮಾರ್
  155. ಶ್ರೀಮತಿ ಸುಶೀಲ
  156. ಪರ್ವತಯ್ಯ
- 2006 157. ಶ್ರೀ ಟಿ.ಬಿ. ಸೊಲಬಕ್ಕನವರ
  158. ಶ್ರೀ ಕೆ.ಟಿ. ಶಿವಪ್ರಸಾದ್
  159. ಶ್ರೀ ಎಚ್.ಎನ್. ಸುರೇಶ್
- 2007 160. ಶ್ರೀ ಎಸ್. ಅಪ್ಪಾಸಾಹೇಬ ಕಾಡಾಪುರಕರ
  161. ಶ್ರೀ ಮಲ್ಲಿಕಾರ್ಜುನ ಜಾದವ್
  162. ಶ್ರೀ ಜೆ.ಎಂ. ಎಸ್. ಮಣಿ
- 2008 163. ಶ್ರೀ ಈಶ್ವರಪ್ಪ ಭೀಮಪ್ಪ ಹಮೀದ್‌ಖಾನ್
  164. ಶ್ರೀ ಕೆ.ಎನ್. ರಾಮಚಂದ್ರನ್
  165. ಶ್ರೀ ಎಲ್. ಶಿವಲಿಂಗಪ್ಪ
- 2009 166. ಶ್ರೀ ಸುರೇಶ್ ಡಿ. ಹಾಲಭಾವಿ
  167. ಶ್ರೀ ಪಿ. ಎನ್. ಆಚಾರ್ಯ
  168. ಶ್ರೀ ಬಸವರಾಜ ಎಲ್. ಜಾನೆ
- 2010 169. ಶ್ರೀ ಹೀರಲಾಲ್ ಮಲ್‌ಕಾರಿ
  170. ಶ್ರೀಮತಿ ಸುಧಾ ವೆಂಕಟೇಶ್
  171. ಶ್ರೀ ಪೊನ್ನಪ್ಪ ಎಸ್. ಕಡೇಮನಿ
- 2011 172. ಶ್ರೀ ಎಸ್. ಕೃಷ್ಣಪ್ಪ,ಬೆಂಗಳೂರು
  173. ಶ್ರೀ ರಮೇಶ್ ರಾವ್, ಉಡುಪಿ
  174. ಶ್ರೀ ಅಶೋಕ ಅಕ್ಕಿ, ಗದಗ
- 2012 175. ಶ್ರೀ ಡಿ.ಎಂ. ಬಡಿಗೇರ್, ಧಾರವಾಡ
  176. ಶ್ರೀ ಪಿ.ಬಿ. ಹರಸೂರ್, ತುಮಕೂರು
  177. ಶ್ರೀ ಎಂ.ಐ. ಡಾಂಗೆ, ಬಾಗಲಕೋಟೆ
- 2013 178. ಶ್ರೀ ಚಂದ್ರಕಾಂತ ಕುಸನೂರು, ಬೆಳಗಾವಿ
  179. ಡಾ. ಬಿ.ಕೆ.ಎಸ್. ವರ್ಮ, ಬೆಂಗಳೂರು
  180. ಶ್ರೀಮತಿ ಲಕ್ಷ್ಮೀ ರಾಮಪ್ಪ, ಸಾಗರ
- 2014 181. ಶ್ರೀ ಚಂದ್ರಶೇಖರ ಸೋಮಶೆಟ್ಟಿ, ಬೀದರ
  182. ಶ್ರೀ ಬಸವರಾಜ ಮುಸಾವಳಗಿ, ಕಲಬುರ್ಗಿ
  183. ಶ್ರೀ ಕೆ. ಗಂಗಾಧರ್, ಬಸವನಬಾಗೇವಾಡಿ

■



# ಅಕಾಡೆಮಿಯ ಪುಸ್ತಕ ಭಂಡಾರ

10 ವರ್ಷಗಳ ಮೇಲ್ಪಟ್ಟ ಅವಧಿಯ ಪುಸ್ತಕಗಳ ವಿವರ
(ಸಾರ್ವಜನಿಕರಿಗೆ 50%, ಪುಸ್ತಕ ಮಾರಾಟಗಾರರಿಗೆ 55% ರಿಯಾಯಿತಿ)

| ಪುಸ್ತಕದ ಹೆಸರು | ಪ್ರಕಟಣಾ ವರ್ಷ | ಮುಖಬೆಲೆ (ರೂ.ಗಳಲ್ಲಿ) |
|---|---|---|
| 1 ರುಮಾಲೆ ಚೆನ್ನಬಸವಯ್ಯ | 1992 | 6.00 |
| 2. ಶಿಲ್ಪಿ ಸಿಂಗಣ್ಣಾಚಾರ್ಯ | 1994 | 10.00 |
| 3. ಪಾವಂಜೆ ಗೋಪಾಲಕೃಷ್ಣಯ್ಯ | 1994 | 10.00 |
| 4. ಪಿ. ಸುಬ್ಬರಾವ್ | 1994 | 10.00 |
| 6. ಎಸ್. ನಂಜುಂಡಸ್ವಾಮಿ | 1994 | 10.00 |
| 7. ಬಾನಯ್ಯ ಗರುಡಾದ್ರಿ | 1995 | 10.00 |
| 8. ಮೂಡುಗೋಡು ಹಿರಣ್ಣಪ್ಪ | 1995 | 10.00 |
| 9. ಮಧ್ಯಪ್ರದೇಶದ ಕಲೆ | 1995 | 10.00 |
| 10. ಎಂ. ಜೆ. ಶೂದ್ದೋದನ | 1995 | 10.00 |
| 11. ಶಿಲ್ಪಕಲೆ | 1995 | 5.00 |
| 12. ಚಿತ್ರಕಲೆ ಮತ್ತು ಮನೋವಿಕಾಸ | 1995 | 5.00 |
| 13. ದೃಶ್ಯಕಲೆ ಎಂದರೇನು? | 1995 | 5.00 |
| 14. ಪೋಸ್ಟ್ ಮಾರ್ಡನಿಸಂ | 1995 | 5.00 |
| 16. ಫೋಟೋ ರಿಯಲಿಸಂ | 1995 | 5.00 |
| 17. ಜನಪದ ಕಲೆ | 1995 | 5.00 |
| 18. ಸಾಂಪ್ರದಾಯಿಕ ಶಿಲ್ಪಕಲೆ | 1995 | 5.00 |
| 19. ಇಂಪ್ರೆಷನಿಸಂ | 1995 | 5.00 |
| 20. ಸರ್ರಿಯಲಿಸಂ | 1995 | 5.00 |
| 21. ದೃಶ್ಯಕಲೆಗಳ ಗುಣಗ್ರಹಣ | 1995 | 5.00 |
| 22. ಅಬ್‌ಸ್ಟ್ರಾಕ್ ಕಲೆ | 1995 | 5.00 |
| 23. ಚಿತ್ರಕಲೆ ಮತ್ತು ಸಂವಹನ | 1995 | 5.00 |
| 24. ಭಾರತೀಯ ಚಿತ್ರಕಲೆ | 1995 | 5.00 |
| 25. ಪಾಪ್ ಕಲೆ | 1995 | 5.00 |

| ಪುಸ್ತಕದ ಹೆಸರು | ಪ್ರಕಟಣಾ ವರ್ಷ | ಮುಖಬೆಲೆ (ರೂ.ಗಳಲ್ಲಿ) |
|---|---|---|
| 26. ಗ್ರಾಫಿಕ್ ಕಲೆ | 1995 | 5.00 |
| 27. ಎಸ್. ಎಸ್. ಕುಕ್ಕೆ | 1997 | 10.00 |
| 28. ಮಧುಗಿರಿ ರಾಮು | 1997 | 10.00 |
| 29. ದೇವಲಕುಂದ ವಾದಿರಾಜ | 1997 | 10.00 |
| 30. ಪಾಪ್ ಕಲೆ | 1997 | 15.00 |
| 31. ಎಸ್.ಎಸ್. ಮುನೋಳಿ | 1998 | 25.00 |
| 32. ಎಫ್.ಎಂ. ಸೂಫಿ | 1998 | 25.00 |
| 33. ಕರ್ನಾಟಕ ಭಿತ್ತಿ ಚಿತ್ರ ಪರಂಪರೆ | 1998 | 100.0 |
| 34. ಜೆ.ಎಸ್. ಖಂಡೇರಾವ್ | 1999 | 35.00 |
| 35. ಬಿ.ಕೆ. ಹುಬಳಿ | 1999 | 25.00 |
| 36. ಎಂ.ಟಿ. ಭೋಪಲೆ | 1999 | 25.00 |
| 37. ಸೋಮಶೇಖರ ಎಂ. ಸಾಲಿ | 1999 | 25.00 |
| 38. ಯೂಸೂಫ್ ಅರಕ್ಕಲ್ | 1999 | 35.00 |
| 39. ಕೆ.ಟಿ. ಶಿವಪ್ರಸಾದ್ | 2000 | 45.00 |
| 40. ಎಂ.ಬಿ. ಪಾಟೀಲ್ | 2000 | 35.00 |
| 41. ವಿಜಯ ಸಿಂಧೂರ | 2000 | 35.00 |
| 42. ಎಂ. ರಾಮನರಸಯ್ಯ | 2000 | 25.00 |
| 43. ಬಸವರಾಜ ಹಳಿಜೋಳ | 2000 | 25.00 |
| 44. ದೃಶ್ಯಕಲಾವಿಮರ್ಶೆ | 2000 | 35.00 |
| 45. ಶಾಂತಲಿಂಗಪ್ಪ ಪಾಟೀಲ | 2000 | 25.00 |
| 46. ಎಸ್.ಜಿ. ವಾಸುದೇವ | 2001 | 40.00 |
| 47. ಕಲಾವಿದರ ಪರಿಚಯಾವಳಿ | 2001 | 200.00 |

6 ರಿಂದ 10 ವರ್ಷಗಳ ಮೇಲ್ಪಟ್ಟ ಅವಧಿಯ ಪುಸ್ತಕಗಳ ವಿವರ (ಸಾರ್ವಜನಿಕರಿಗೆ 30%, ಪುಸ್ತಕ ಮಾರಾಟಗಾರರಿಗೆ 35% ರಿಯಾಯಿತಿ)

| | | |
|---|---|---|
| 48. ಚಿತ್ತಾರ ಬೊಂಬೆ | 2004 | 40.00 |
| 49. ಶೀಗಿಯ ಚಿತ್ರಕಲೆ | 2004 | 40.00 |
| 50. ಕಸೂತಿ ಚಿತ್ರಕಲೆ | 2004 | 40.00 |
| 51. ಬೆಳದಿಂಗಳ ಚಿತ್ರಕಲೆ | 2004 | 40.00 |
| 52. ನಾಗರಾಧನೆ ಚಿತ್ರಕಲೆ | 2004 | 40.00 |
| 53. ಬಿದರಿ ಚಿತ್ರಕಲೆ | 2004 | 40.00 |
| 54. ರಂಗೋಲಿ ಚಿತ್ರಕಲೆ | 2004 | 40.00 |
| 55. ಹೆಜ್ಜೆ ಚಿತ್ರಕಲೆ | 2004 | 40.00 |

| ಪುಸ್ತಕದ ಹೆಸರು | ಪ್ರಕಟಣಾ ವರ್ಷ | ಮುಖಬೆಲೆ (ರೂ.ಗಳಲ್ಲಿ) |
|---|---|---|
| 56. ಯಕ್ಷಗಾನ ಚಿತ್ರಕಲೆ | 2004 | 40.00 |
| 57. ಎಂ.ಆರ್. ಬಾಳೀಕಾಯಿ | 2004 | 40.00 |
| 58. ಪುರುಷೋತ್ತಮ ಕಾರಂತ | 2004 | 40.00 |
| 59. ಎಸ್. ಕಾಳಪ್ಪ | 2004 | 40.00 |
| 60. ಎಚ್.ಎಸ್. ಇನಾಮತಿ | 2004 | 40.00 |
| 61. ವಿ.ಜಿ. ಅಂದಾನಿ | 2004 | 40.00 |
| 62. ಕೆ. ಕೇಶವಯ್ಯ | 2004 | 40.00 |
| 63. ವಿ.ಟಿ. ಕಾಳೆ | 2004 | 40.00 |
| 64. ರಘೋತ್ತಮಪುಟ್ಟಿ | 2004 | 40.00 |
| 65. ಸಿ. ಚಂದ್ರಶೇಖರ | 2004 | 40.00 |
| 66. ಮುಖಗಳೊಂದಿಗೆ ಮುಖಾಮುಖಿ | 2004 | 50.00 |
| 67. ಚಿತ್ರಕಲಾ ಸಂಪುಟ ಭಾಗ-5 | 2004 | 100.00 |
| 68. ಚಿತ್ರಕಲಾ ಸಂಪುಟ ಭಾಗ-6 | 2004 | 100.00 |

3 ರಿಂದ 5 ವರ್ಷಗಳ ಮೇಲ್ಪಟ್ಟ ಅವಧಿಯ ಪುಸ್ತಕಗಳ ವಿವರ
(ಸಾರ್ವಜನಿಕರಿಗೆ 20%, ಪುಸ್ತಕ ಮಾರಾಟಗಾರರಿಗೆ
25% ರಿಯಾಯಿತಿ)

| | | |
|---|---|---|
| 68. ಚಿತ್ರಕಲಾ ದರ್ಪಣ | 2007 | 160.00 |
| 69. ಆರ್.ಎಂ. ಹಡಪದ್ | 2007 | 80.00 |
| 70. ಎಸ್.ಎಂ. ಪಂಡಿತ್ | 2007 | 50.00 |
| 71. ಶಂಕರಗೌಡ ಬೆಟ್ಟದೂರು | 2007 | 80.00 |
| 72. ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿ | 2007 | 120.00 |
| 73. ಮ.ಈ. ಗುರು | 2007 | 100.00 |
| 74. ವೈ. ಸುಬ್ರಮಣ್ಯ ರಾಜು | 2007 | 50.00 |
| 75. ಜಿ.ವಿ. ಸುಭಾಷಿಣಿದೇವಿ | 2007 | 50.00 |

2009ರಿಂದ 2010ರ ವರೆಗೆ ಪ್ರಕಟವಾದ ಪುಸ್ತಕಗಳ ವಿವರ
(ಸಾರ್ವಜನಿಕರಿಗೆ 15%, ಪುಸ್ತಕ ಮಾರಾಟಗಾರರಿಗೆ
20% ರಿಯಾಯಿತಿ)

| | | |
|---|---|---|
| 76. ಕೆ.ಕೆ. ಹೆಬ್ಬಾರ್ | 2008 | 100.00 |
| 77. ಕಲೆ ಮತ್ತು ಕಲಾನುಭವ | 2008 | 40.00 |
| 78. ವೆಂಕಟಪ್ಪ ಸಮಾಕಾಲೀನ ಪುನರಾವಲೋಕನ | 2008 | 75.00 |
| 79. ರೇಖಾಚಿತ್ರ | 2008 | 40.00 |
| 80. ಕಲೆ ಮತ್ತು ರಸಸ್ವಾದನೆ | 2008 | 40.00 |

| ಪುಸ್ತಕದ ಹೆಸರು | ಪ್ರಕಟಣಾ ವರ್ಷ | ಮುಖಬೆಲೆ (ರೂ.ಗಳಲ್ಲಿ) |
|---|---|---|
| 81. ಡಾ. ಬಿ.ಕೆ. ಹಿರೇಮಠ್ | 2008 | 100.00 |
| 82. ಜಿ.ವೈ. ಹುಬ್ಳೀಕರ್ | 2008 | 100.00 |
| 83. ಇನ್‌ಷ್ಟಾಲೇಷನ್ | 2008 | 190.00 |
| 84. ಆರ್.ಎಸ್. ನಾಯ್ಡು | 2008 | 70.00 |
| 85. ನೋಟ ಪಲ್ಲಟ | 2008 | 70.00 |
| 86. ಸಿ.ಪಿ. ನಾಗೌಡ | 2008 | 70.00 |
| 87. ಕಲಾಕೋಶ | 2008 | 180.00 |
| 88. ಸೌಂದರ್ಯ ಶಾಸ್ತ್ರ | 2008 | 100.00 |
| 89. ಚಿತ್ರಕಲಾ ಪ್ರಪಂಚ | 2008 | 250.00 |
| 90. ಬಾರೋಕ್ ಕಲೆ | 2009 | 100.00 |
| 91. ಪ್ರೊ. ವಿ.ಬಿ. ಹಿರೇಗೌಡರ್ | 2009 | 80.00 |
| 92. ಎಂ.ಜಿ. ವಾಚೇದಮಠ | 2010 | 80.00 |
| 93. ಟಿ.ವಿ. ಗಣೇಶಗುಡಿ | 2010 | 85.00 |
| 94. ಅಪ್ಪಾಸಾಹೇಬ ಬಿ. ಕಾಡಾಪುರಕರ್ | 2011 | 80.00 |
| 95. ಕೆ. ಬಿ. ಕುಲಕರ್ಣಿ | 2011 | 80.00 |
| 96. ಎಂ.ಬಿ. ಲೋಹಾರ್ | 2012 | 80.00 |

## ಅಪರೂಪದ ಅತಿಥಿ





ಕರ್ನಾಟಕ ಲಲಿತ ಕಲಾ ಅಕಾಡೆಮಿಗೆ ಭೇಟಿ ನೀಡಿದ ರಾಜ್ಯದ ಹಿರಿಯ ಕಲಾವಿದರಾದ ಶ್ರೀ ಕೆ.ಟಿ. ಶಿವಪ್ರಸಾದ್ ಅವರನ್ನು ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿ ಅವರು ಸನ್ಮಾನಿಸಿದ ಸಂದರ್ಭಕ್ಕೆ ಕಲಾವಿಮರ್ಶಕ ಶ್ರೀ ಕೆ.ವಿ. ಸುಬ್ರಹ್ಮಣ್ಯಂ, ಅಕಾಡೆಮಿ ಸದಸ್ಯರಾದ ಶ್ರೀ ಪ್ರಭು ಹರಸೂರು, ರಿಜಿಸ್ಟ್ರಾರ್ ಕೆ. ಸುಧೀಂದ್ರ ಮತ್ತಿತರರು ಸಾಕ್ಷಿಯಾದರು.


## 1994–2014 ಅವಧಿಯ

# ‘ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ’ ಪುರಸ್ಕೃತರು

**ನಾ**ಡಿನ ಚಿತ್ರಕಲೆಯನ್ನು ವಿಖ್ಯಾತಗೊಳಿಸಿದ ಶ್ರೇಷ್ಠ ಚಿತ್ರಕಲಾವಿದರ ನಾಡಿದು. ಈ ಕ್ಷೇತ್ರದ ಹಿರಿಯ ಕಲಾವಿದರನ್ನು ಪುರಸ್ಕರಿಸುವ ಉದ್ದೇಶದಿಂದ ಕನ್ನಡ ನಾಡಿನ ಹೆಮ್ಮೆಯ ಕಲಾವಿದ ದಿ. ವರ್ಣಶಿಲ್ಪಿ ವೆಂಕಟಪ್ಪನವರ ಹೆಸರಿನಲ್ಲಿ 1993ರಿಂದ ಸ್ಥಾಪಿತವಾಗಿರುವ ಪ್ರಶಸ್ತಿಯೇ **‘ವರ್ಣಶಿಲ್ಪಿ ವೆಂಕಟಪ್ಪ’** ಪ್ರಶಸ್ತಿ. ಪ್ರಶಸ್ತಿಯು ಪ್ರಶಸ್ತಿ ಪುತ್ಥಳಿ, ಫಲಕ, ಶಾಲು, ಹಾರ ಹಾಗೂ ಒಂದು ಲಕ್ಷ ರೂಪಾಯಿಗಳ ನಗದನ್ನು ಒಳಗೊಂಡಿರುತ್ತದೆ. 2008ನೆಯ ಸಾಲಿನಿಂದ ಪ್ರಶಸ್ತಿ ಮೊತ್ತ ಮೂರು ಲಕ್ಷ ರೂಪಾಯಿ ನಗದನ್ನು ಒಳಗೊಂಡಿದ್ದು ಈವರೆಗೆ ಈ ಪ್ರಶಸ್ತಿಗೆ ಪುರಸ್ಕೃತರಾದ 21 ಕಲಾವಿದ ಮಹನೀಯರ ಪಟ್ಟಿ ಮಾಹಿತಿಗಾಗಿ.



ಡಾ. ಕೆ.ಕೆ. ಹೆಬ್ಬಾರ್
(1994)



ಡಿ.ವಿ. ಹಾಲಭಾವಿ
(1995)


ಎಂ.ಎ. ಚೆಟ್ಟಿ
(1996)



ಕೆ.ಆರ್. ತಿಪ್ಪೇಸ್ವಾಮಿ
(1997)


ಆರ್.ಎಂ. ಹಡಪದ್
(1998)


ಎಂ.ಜೆ. ಶುದ್ಧೋದನ
(1999)


ಎಂ.ಎಸ್. ಚಂದ್ರಶೇಖರ್
(2000)


ಎಸ್.ಎಸ್. ಮುನೋಳಿ
(2001)



ಡಾ. ಜೆ.ಎಸ್.ಖಂಡೇರಾವ್
(2002)



ಎಸ್.ಜಿ.ವಾಸುದೇವ್
(2003)




ಯೂಸುಫ್ ಅರಕ್ಕಲ್
(2004)




ವಿಜಯ ಸಿಂಧೂರ್
(2005)




ಬಿ.ಕೆ.ಹುಬ್ಳಿ
(2006)



ಶಂಕರಗೌಡ
ಬೆಟ್ಟದೂರು (2007)




ಎಂ.ಬಿ.ಪಾಟೀಲ
(2008)



ಡಾ.ವಿ.ಜಿ.ಅಂದಾನಿ
(2009)



ಕೆ.ಚಂದ್ರನಾಥ
ಆಚಾರ್ಯ (2010)



ಪ್ರೊ. ವಿ.ಬಿ.ಹಿರೇಗೌಡರ್
(2011)



ಯು.ಭಾಸ್ಕರ್‌ರಾವ್
(2012)



ಕೆ.ಟಿ.ಶಿವಪ್ರಸಾದ್
(2013)



ವಿ.ಟಿ.ಕಾಳೆ
(2014)

ಮಾದರಿ ಅರ್ಜಿ ನಮೂನೆ

ಕಲಾ ಸಂಕ್ರಾಂತಿ
KALA SANKRANTI
Karnataka Art Summit 2016

# KALA SANKRANTI

**KARNATAKA**
**ART SUMMIT 2016**

**APPLICATION FORM**
**FOR BOOKING A STALL**

PHOTO
(self attested - signature across photograph and form)

Name :

Date Of Birth: Age:

Address:

Contact Nos: Mobile:

Other:

Email:
Website (If Any)

Independent / Employed

Designation With Name And Address Of Institute
(If Employed)

Please Tick Against Category Selected For Participation:

| | |
|---|---|
| Painting (Contemporary) ☐ | Traditional Painting ☐ |
| Graphic / Print Media ☐ | PH Photography ☐ |
| New Media ☐ | URCuration ☐ |

Participant: Dealer of Art Material ☐ Publisher ☐

Payment made in demand draft for an amount of Rs. 100/- drawn in favour of Registrar, Karnataka Lalitkala Academy, Bengaluru.
I agree to abide by the rules and regulations of Kala Sankranti.

Date: Signature of Artist/Curator/Participant

Note: Please read the rules and regulations

# KALA SANKRANTI

## KARNATAKA ART SUMMIT 2016

## RULES AND REGULATIONS

**Regarding Stalls and Art Works:**

1. Application form to be duly filled and submitted before due date. Incomplete forms will be rejected.
2. Applicants submitting art works will have to submit two passport size photographs and of art works for selection.
3. All applications will be scrutinised by a selection committee of experts whose decision will be final.
4. Selected Applicants will be informed.

**Stall and art work details:**

1. Size of each stall
2. Size of works for paintings:
3. Size of works for prints:
4. Number of works to be submitted by prescribed.

**Payment details:**

1. Payment to be made by Demand Draft in favour of Registrar, Karnataka Lalitkala Academy
2. Total amount payable for booking one stall (size: 10' x 10') for 4 days will be announced.
3. Participant will have to display the works the previous day before inauguration of event.
4. A discount is provided on total cost for participants residing in Karnataka.

Kala Sankranti is a unique four day art summit being held for the very first time in Karnataka. The art summit will showcase the unique contribution and best of art works by select artists from across the State of Karnataka besides works by a few artists residing outside Karnataka. The summit will bring together nearly 100 artists whose works will be on display in state of the art 100 stalls created especially for the occasion.

Kala Sankranti will celebrate art in a multi dimensional approach which will exhibit contemporary paintings, prints, photographs, new media, performance art, traditional paintings besides curated exhibits. The summit will also be open to publishers and art material dealers for display of the latest publications and materials.

Organised by the Karanataka Lalitkala Academy , Kala Sankranti will be held in the premises of Ravindra Kalakshetra.

Kala Sankranti provides a first time added incentive for art collectors. On purchase of a token a visitor would be eligible for a lucky draw where on winning he would have a unique opportunity to choose to possess an artwork by a professional artist for only Rs. 5000/-

Kala Sankranti is a celebration of art with artists and art connoisseurs and serves to uphold the commitment of the Academy in promoting professional values and quality of art in Karnataka.

[illegible]

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

Department of Kannada & Culture

## Karnataka Lalithakala Academy

Photo

Name :

Date of Birth :

Award :

Selected for State Annual Exhibition year : / / /

(For example : 41th, 42th, 43rd Year : 2012/2013/2014)

Address :

Phone & email :

Signature                                        Signature of Chairman

[illegible]

National Academy of Art Identity Card No. :

CELEBRATING 50 YEARS OF ART IN KARNATAKA

In case this card is    Found kindly return to
                        Lost kindly inform

Karnataka Lalithakala Academy
2nd Floor, Kannada Bhavana, J.C. Road, Bangalore - 560 002
p. 080 -22480297, E. kla.karnataka@gmail.com
W. www.lalithakalakarnataka.org